# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 134 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 26.11.2024 • ಮಂಗಳವಾರ • ಪುಟ:04 • ಬೆಲೆ:2
Volume:02 • Issue: 134 • PRGI No:KARKAN/2023/88055 • VIJAYANAGARA • 26.11.2024 • Tuesday • Page:04 • Rs:2










## ಆನಂದ ಬಾಣ




# ಸರಳ ಮದುವೆಗಳು ಸಾಮರಸ್ಯ ತರಲಿವೆ

## ಸಾಮೂಹಿಕ ವಿವಾಹಗಳು ಬಡವರಿಗೆ ವರದಾನ | ನವಜೋಡಿಗಳಿಗೆ ಗುರುಗಳ ಆಶೀರ್ವಾದ ದೊರೆಯುತ್ತದೆ

## ಗದಗಿನ ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯಜ್ಜ, ಮಲ್ಲಿಕಾರ್ಜುನಶಿವಾಚಾರ್ಯ ಮಹಾ ಸ್ವಾಮಿಗಳು ಆಶೀರ್ವಚನ





■ **ಹಂಪಿ ಟೈಮ್ಸ್ ಹೊಸಪೇಟೆ**

ಲಕ್ಷಾಂತರ ರೂಪಾಯಿ ಸಾಲಮಾಡಿ ಮದುವೆ ಮಾಡಿದ ಅನೇಕ ಸಂಸಾರಗಳಲ್ಲಿ ಇಂದು ಸಾಮರಸ್ಯ ಜೀವನ ಕಾಣದೆ ಕಲಹದೊಂದಿಗೆ ಅಂತ್ಯಗೊಳ್ಳುತ್ತಿರುವುದು ವಿಷಾದನೀಯ. ಸರಳ ಮದುವೆಗಳು ಸಂಸಾರದಲ್ಲಿ ಪರಸ್ಪರ ಪ್ರೀತಿ, ಸಾಮರಸ್ಯ ಹೆಚ್ಚಿಸಿ, ಸಿರಿವಂತಿಕೆಗೆ ಅಡಿಪಾಯವಾಗಿವೆ ಎಂದು ಗದಗಿನ ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯಜ್ಜ ಹೇಳಿದರು.

ತಾಲೂಕಿನ 114 ಡಣಾಪುರ ಗ್ರಾಮದ, ಕಲ್ಬುರ್ಗಿ ಶ್ರೀಶರಣಬಸವೇಶ್ವರ ಪುರಾಣ ಸಮಿತಿಯು ಸೋಮವಾರ ಗ್ರಾಮದ ಕರಿಯಮ್ಮದೇವಿ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡಿದ್ದ ಕಲ್ಬುರ್ಗಿ ಶ್ರೀಶರಣ ಬಸವೇಶ್ವರ 24ನೇವರ್ಷದ ಪುರಾಣ ಮಹಾ ಮಂಗಲಾ, ಸಾಮೂಹಿಕ ವಿವಾಹ ಹಾಗು ತುಲಾಭಾರ ಕಾರ್ಯಕ್ರಮದ ದಿವ್ಯಸಾನಿಧ್ಯವಹಿಸಿ ಆಶೀರ್ವಚನ ನೀಡಿದರು.

ಶ್ರೀಹರಗುರು ಶರಣರ ಸಾನಿಧ್ಯದಲ್ಲಿ ನವಜೋಡಿಗಳು ಸಾಮೂಹಿಕವಾಗಿ ಲಗ್ನವಾಗುವುದರಿಂದ ದುಂದು ವೆಚ್ಚಕ್ಕೆ ಕಡಿವಾಣ ಹಾಕಿ, ಶರಣರ ಆರ್ಶೀವಾದವನ್ನೂ ಪಡೆಯ ಬಹುದು. ಹರಮುನಿದರೆ ಗುರು ಕಾಯುವನು ಎಂಬಂತೆ, ಗುರುವಿನ ಆಶೀರ್ವಾದ ಅನೇಕ ಸಂಕಷ್ಟಗಳನ್ನು ದೂರಾಗಿಸುತ್ತವೆ. ನೂತನ ವಧುವರರು ಪರಸ್ಪರ ಅರಿತುಕೊಂಡು ಜೀವನಕಟ್ಟಿಕೊಂಡು, ಮಿತ ಸಂತಾನ ಪಾಲಿಸಿ. ಇಂದು ವೈವಾಹಿಕ ಜೀವನದಲ್ಲಿ ಪರಸ್ಪರ ಅನೋನ್ಯತೆ ಕಡಿಮೆಯಾಗಿ, ಕೊಲೆಗಳಲ್ಲಿ ಜೀವನ ಅಂತ್ಯ ಕಾಣುತ್ತಿ ರುವುದು ಮಾದ್ಯಮಗಳಲ್ಲಿ ನೋಡುತ್ತಿದ್ದೇವೆ. ಮಹಾಮಹೀಮರಾದ ಪಂಡಿತ ಪುಟ್ಟರಾಜಗವಾಯಿಗಳು ನಡೆದಾಡಿದ ಈ ಪುಣ್ಯಸ್ಥಳದಲ್ಲಿ ಸತಿಪತಿಗಳಾಗಿರುವ ನವೋಡಿಗಳು ಪುಣ್ಯಾತ್ಮರು ಎಂದರು.

ಪಟ್ಟಣದ ಮಲ್ಲಿಕಾರ್ಜುನಶಿವಾಚಾರ್ಯ ಮಹಾ ಸ್ವಾಮಿಗಳು ಆಶೀರ್ವಚನ ನೀಡಿ, ಸಾಮೂಹಿಕ ವಿವಾಹಗಳು ಬಡವರಿಗೆ ವರದಾನವಾಗಿವೆ. ಮಹಾಶಿವಯೋಗಿ ಹಾನಗಲ್ ಕುಮಾರೇಶ್ವರರು ಸಮಾಜಮುಖಿಯಾಗಿ ಆರಂಭಿಸಿದ ಇಂತಹ ಕಾರ್ಯಕ್ರಮಗಳು ಇಂದಿಗೂ ಶಾಶ್ವತವಾಗಿವೆ. ಇಂತಹ ಸಮಾಜಮುಖಿ ಕಾರ್ಯಕ್ರಮಗಳು ನಡೆದು ಗ್ರಾಮಗಳಲ್ಲಿ ಶಾಂತಿ, ಸೌಹಾರ್ದತೆ ನೆಲೆಸಲಿ ಎಂದರು. ಈ ಸಂರ್ಭದಲ್ಲಿ ಆರು ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಇದೇ ಸಂದರ್ಭದಲ್ಲಿ ಗದಗಿನ ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯಜ್ಜರವರಿಗೆ ಗ್ರಾಮದ ಸದ್ಭಕ್ತರಿಂದ 2588ನೇ ತುಲಾಭಾರ ನಡೆಯಿತು.

ಸಮಾಜ ಸೇವಕ ಕುರಿ ಶಿವಮೂರ್ತಿ, ಗ್ರಾ.ಪಂ. ಅಧ್ಯಕ್ಷ ಹೆಚ್.ಮಲ್ಲೇಶ್, ಶ್ರೀನಿವಾಸವ್ಯಾಸ, ಹೊಸಪೇಟೆ ಹನುಮಂತಪ್ಪ, ಗ್ರಾ.ಪಂ.ಸದಸ್ಯರಾದ ಗುಂಡಾಕೃಷ್ಣ, ಗುಂಡಾಸ್ವಾಮಿ, ಈ.ಮಂಜುನಾಥ, ಪಾರ್ವತಮ್ಮ, ಪದ್ಮಾವತಿನಾಗರಾಜ್, ಮಂಜಯ್ಯಸ್ವಾಮಿ ಸೇರಿದಂತೆ ಪುರಾಣಸಮಿತಿಯ ಸದಸ್ಯರಿದ್ದರು.

## ನ.27 ಕೊಪ್ಪಳದಲ್ಲಿ ಸಿರಿಧಾನ್ಯ ನಡಿಗೆ

**ಹಂಪಿ ಟೈಮ್ಸ್ ಕೊಪ್ಪಳ**

ಕೃಷಿ ಇಲಾಖೆ ವತಿಯಿಂದ 2024-25ನೇ ಸಾಲಿನ ಸಿರಿಧಾನ್ಯ ನಡಿಗೆ ಕಾರ್ಯಕ್ರಮವನ್ನು ನ.27ರಂದು ನಗರದ ಶ್ರೀ ಗವಿಸಿದ್ದೇಶ್ವರ ಗವಿಮಠ ಆವರಣದಿಂದ ಅಶೋಕ ಸರ್ಕಲ್ ವರೆಗೆ ಸಿರಿಧಾನ್ಯ ನಡಿಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಿರಿಧಾನ್ಯ ನಡಿಗೆಯಲ್ಲಿ ಎಲ್ಲಾ ಸಿರಿಧಾನ್ಯಗಳು ಪೋಷಕಾಂಶಗಳಿಂದ ಸಮೃದ್ಧವಾಗಿದ್ದು, ಹೃದಯ ಆರೋಗ್ಯ, ಮದುಮೇಹ ನಿಯಂತ್ರಣ ಮತ್ತು ತೂಕ ಸಮತೋಲನಕ್ಕೆ ಸಹಾಯ ಮಾಡುತ್ತವೆ. ಈ ಆಹಾರಗಳ ಉಪಯೋಗ ವಿವಿಧ ರೀತಿಯ ಸ್ಪರ್ಧೆಗಳು ನಮ್ಮ ಪಾರಂಪರಿಕ ಆಹಾರ ಪದ್ಧತಿಗಳನ್ನು ಜನಪ್ರಿಯಗೊಳಿಸಲು ಸಹಾಯ ಮಾಡುತ್ತವೆ. ಈ ಆಹಾರಗಳ ಉಪಯಕ್ತತೆ ಬಗ್ಗೆ ತಿಳಿಸುವುದು ಅತೀ ಅವಶ್ಯಕವಾಗಿರುವುದರಿಂದ ಎಲ್ಲಾ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ಸಾರ್ವಜನಿಕರು ಭಾಗವಹಿಸಿ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

# ವಿಳಂಬ ಕಾಮಗಾರಿಗಳನ್ನ ಗಮನಕ್ಕೆ ತನ್ನಿ

## ಶಾಸಕ ಗವಿಯಪ್ಪ ಹೇಳಿಕೆ | ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ



**ಕಾಮಗಾರಿ ವಿವರ:**
**20.24 ಕೋಟಿ ಅನುದಾನ ದಲ್ಲಿ ಬೈಲುವದ್ದಿಗೇರಿ ಯಿಂದ ಹೊಸ ಚಿನ್ನಾಪುರಕ್ಕೆ 6.90 ಕಿಲೋಮೀಟರ್ ಹೊಸ ಎಂಡಿಆರ್ ರಸ್ತೆ ಅಭಿವೃದ್ಧಿ ಹಾಗೂ ಹೊಸಪೇಟೆಯ ಚಿತ್ತವಾಡಿಗಿ ಯಿಂದ ಇಪ್ಪಿತೇರಿವರೆಗೆ 4 ಕಿಲೋಮೀಟರ್ ರಸ್ತೆ ಅಭಿವೃದ್ಧಿ ಕಾಮಗಾರಿ ಮತ್ತು 7.40 ಕೋಟಿ ವೆಚ್ಚದಲ್ಲಿ ಬೆಲ್ಲ ಕಾಂಕ್ರೀಟ್ ಕಾಲುವೆ ಆಧುನಿಕರಣ ಕಾಮಗಾರಿಗೆ ಶಾಸಕರು ಭೂಮಿ ಪೂಜೆ ನೆರವೇರಿಸಿದರು.**

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಕ್ಷೇತ್ರವು ಪ್ರವಾಸಿಗರ ಪ್ರಮುಖ ತಾಣವಾಗಿದೆ. ಒಳ ರಸ್ತೆಗಳಿಂದ ಪ್ರವಾಸಿಗರಿಗೆ ಇನ್ನಷ್ಟು ಅನುಕೂಲವಾಗಲಿದೆಯಲ್ಲದೆ ರೈತರು ತಮ್ಮ ಹೊಲಗಳಿಗೆ ನಿರಾಯಾಸವಾಗಿ ತಲುಪಲು ಒಳ ರಸ್ತೆಗಳು ಮುಖ್ಯವಾಗಲಿದೆ ಎಂದು ವಿಜಯನಗರ ಕ್ಷೇತ್ರ ಶಾಸಕ ಹೆಚ್.ಆರ್. ಗವಿಯಪ್ಪ ಹೇಳಿದರು.

ಹೊಸಪೇಟೆ ತಾಲೂಕಿನ ಬೈಲುವದ್ದಗೇರಿ ಗ್ರಾಮ ಮತ್ತು ಇಪ್ಪಿತೇರಿಯಲ್ಲಿ ಅ.28 ರಂದು ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಬೈಲುವದ್ದಿಗೇರಿ ಯಿಂದ ಹೊಸ ಚಿನ್ನಾಪುರಕ್ಕೆ 6.90 ಕಿಲೋಮೀಟರ್ ಹೊಸ ಎಂಡಿಆರ್ ರಸ್ತೆ ಅಭಿವೃದ್ಧಿ ಕಾಮಗಾರಿಯು ನಾನಾ ಕಾರಣಗಳಿಂದ ವಿಳಂಬವಾಗಿತ್ತು. ಈಗ ಈ ಕಾಮಗಾರಿಗೆ ಚಾಲನೆ ಸಿಕ್ಕಿರುವುದು ಬಳ್ಳಾರಿಯಿಂದ ಹೊಸಪೇಟೆ ಕಡೆಗೆ ಬರುವ ಪ್ರವಾಸಿಗರಿಗೆ ಹಂಪಿ, ಕಮಲಾಪುರ ಮತ್ತು ಆಟಲ್ ಬಿಹಾರಿ ವಾಜಪೇಯಿ ಜಿಯೋಲಾಜಿಕಲ್ ಪಾರ್ಕ್ ಸೇರಿದಂತೆ ವಿವಿಧ ಪ್ರವಾಸಿ ಸ್ಥಳಗಳಿಗೆ ತಲುಪಲು ಒಳ ರಸ್ತೆಯಿಂದ ಅನುಕೂಲವಾಗುತ್ತದೆ. ಮತ್ತು ಈ ಭಾಗದ ರೈತರಿಗೂ ಸಹ ತಮ್ಮ ಹೊಲಗಳಿಗೆ ನಿರಾಯಾಸವಾಗಿ ತಲುಪಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಈ ಕಾಮಗಾರಿಯನ್ನು ಬೇಗನೆ ಪೂರ್ಣಗೊಳಿಸಬೇಕು ಹಾಗೂ ಒಳ್ಳೆಯ ಗುಣಮಟ್ಟದ ಕಾಮಗಾರಿಯಾಗಿರಬೇಕು ಎಂದು ಗುತ್ತಿಗೆ ವಹಿಸದ ಆತ್ರೇಯ ಕನ್‌ಸ್ಟ್ರಕ್ಷನ್ ತಿಳಿಸಿದರು.

ಹೊಸಪೇಟೆಯಿಂದ ಬಳ್ಳಾರಿಗೆ ಹೋಗುವ ಹೆದ್ದಾರಿ ಕಾಮಗಾರಿಯು ವಿಳಂಬವಾಗುತ್ತಿದ್ದು, ಕಾಮಗಾರಿ ಗುತ್ತಿಗೆ ಪಡೆದವರಿಗೆ ತ್ವರಿತಗತಿಯಲ್ಲಿ ರಸ್ತೆ ಕಾಮಗಾರಿ ಪೂರ್ಣಗೊಳಿಸಲು ಹಾಗೂ ಸಣ್ಣಪುಟ್ಟ ಸಮಸ್ಯೆಗಳಿಗೆ ಕಾಮಗಾರಿಯನ್ನು ವಿಳಂಬಮಾಡಬಾರದು, ಏನೇ ಸಮಸ್ಯೆ ಇದ್ದರೂ ಜನಪ್ರತಿನಿಧಿಗಳ ಗಮನಕ್ಕೆ ತಂದರೆ ಅವುಗಳನ್ನು ಅಧಿಕಾರಿಗಳಿಗೆ ಹೇಳಿ ಸರಿಪಡಿಸಲಾಗುವುದು ಎಂದು ಗುತ್ತಿಗಾರರಿಗೆ ತಿಳಿಸಲಾಗಿದೆ ಎಂದರು.

ಬೈಲುವದ್ದಿಗೇರಿ ಗ್ರಾಮ ಪಂಚಾಯತಿಯ ಅಧ್ಯಕ್ಷೆ ಶಾಂತಮ್ಮ ಮಾತನಾಡಿ, ಗ್ರಾಮದಲ್ಲಿ ಬಸ್ ನಿಲ್ದಾಣ, ಬಡವರಿಗೆ ಮನೆಗಳು ಹಾಗೂ ಸುಡ ಗಾಡಪ್ಪ ದೇವಸ್ಥಾನಕ್ಕೆ ಬಹಳ ಸಂಖ್ಯೆಯಲ್ಲಿ ಭಕ್ತರು ಆಗಮಿಸುವುದರಿಂದ ಶೌಚಾಲಯದ ವ್ಯವಸ್ಥೆ ಮಾಡಿಕೊಡಬೇಕಾಗಿದೆ ಎಂದು ಮನವಿ ಮಾಡಿದರು. ಇದಕ್ಕೆ ಶಾಸಕರು ಬಸ್ ನಿಲ್ದಾಣಕ್ಕೆ 5 ಲಕ್ಷ ನೀಡಲಾಗುವುದು ಮತ್ತು ಮನೆಗಳಿಗೆ, ಶೌಚಾಲಯ ನಿರ್ಮಾಣಕ್ಕೆ ಮುಂದಿನ ದಿನಗಳಲ್ಲಿ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ಹೇಳಿದರು.

ತಹಶಿಲ್ದಾರರಾದ ಶೃತಿ ಎಂ.ಎಂ, ಇಪ್ಪಿತೇರಿ ಗ್ರಾಪಂ ಅಧ್ಯಕ್ಷೆ ಕಿಚಡಿ ಜಯಪದ್ಮ, ಬೈಲುವದ್ದಿಗೇರಿ ಗ್ರಾಮ ಪಂಚಾಯತಿ ಪಿಡಿಓ ಹನುಮಂತಪ್ಪ, ಶಾಂತ ಕನ್‌ಸ್ಟ್ರಕನ್ ಅಜೀತ್ ಶೆಟ್ಟಿ ಹಾಗೂ ವಿವಿಧ ಅಧಿಕಾರಿ, ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

# ಮಕ್ಕಳಲ್ಲಿನ ಕಲೆಗಳನ್ನು ಗುರುತಿಸಿ ಪ್ರೋತ್ಸಾಹಿಸಿ

## ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ಹೇಳಿಕೆ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಅನಾವರಣಗೊಳಿಸಲು ಪ್ರತಿಭಾ ಕಾರಂಜಿ ಒಂದೊಳ್ಳೆ ವೇದಿಕೆಯಾಗಿದೆ ಎಂದು ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ಹೇಳಿದರು.

ಪಟ್ಟಣದ ಜ್ಞಾನಭಾರತಿ ವಿದ್ಯಾ ಸಂಸ್ಥೆಯಲ್ಲಿ ತಾಲೂಕು ಮಟ್ಟದದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಪ್ರತಿಭಾಕಾರಂಜಿ ಹಾಗೂ ಕಲೋತ್ಸೋವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಬೆಳೆಯುವ ಸಿರಿಯಲ್ಲಿ ಮೊಳಕೆಯಲ್ಲಿ ನೋಡು ಎನ್ನುವ ಹಾಗೇ, ಮಕ್ಕಳಲ್ಲಿ ಅನೇಕ ಕಲೆಗಳು ಮೈಗೂಡಿಕೊಂಡಿರುತ್ತವೆ. ಅವುಗಳನ್ನು ಹೊರತೆಗೆದು ಪ್ರೋತ್ಸಾಹಿಸಲು ಪ್ರತಿಭಾ ಕಾರಂಜಿ ಒಳ್ಳೆಯ ವೇದಿಕೆಯಾಗಿದೆ. ಹಾಡುಗಾರಿಕೆ, ನೃತ್ಯ ಪ್ರದರ್ಶನ, ನಾಟಕ, ಅಣಕು, ಏಕಪಾತ್ರ ಅಭಿನಯಗಳ ಮೂಲಕ ಯಾವುದೇ ಆತಂಕವಿಲ್ಲದೆ, ಪ್ರದರ್ಶಿಸುವ ಕಲೆ ಅವರಲ್ಲಿರುತ್ತದೆ. ಇದಕ್ಕೆ ಪೂರಕವಾಗಿ ಶಿಕ್ಷಕರು ಅವರ ಕಲೆಗಳನ್ನು ಗುರುತಿಸುವ ಮೂಲಕ ಇಂತಹ ತಾಲೂಕು ಮಟ್ಟದ ವೇದಿಕೆಯಲ್ಲಿ ಪ್ರಸ್ತುತ ಪಡಿಸುವುದರಿಂದ ಮಕ್ಕಳಲ್ಲಿ ಇನ್ನಷ್ಟು ಉತ್ಸಾಹ ಮೂಡುತ್ತದೆ. ಕೇವಲ ಪಠ್ಯ ಜ್ಞಾನದಿಂದ ಈ ದಿನ ಏನನ್ನೂ ಸಾಧಿಸಲು ಸಾಧ್ಯವಾಗುವುದಿಲ್ಲ. ಜಾಗತಿಕ ಮಟ್ಟದಲ್ಲಿ ಕಲೆಗಳಿಗೂ ಸಾಕಷ್ಟು ಪ್ರೋತ್ಸಾಹವಿದೆ ಎಂದರು. ಕಿರುತೆರೆಗಳಲ್ಲಿ ಮಕ್ಕಳಿಗಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ಸಾದಾರಪಡಿಸುವುದಿದೆ. ಅಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ತಾಲೂಕಿನ ಕೀರ್ತಿಪಾತಕೆಯನ್ನು ಹಾರಿಸಬೇಕೆಂದು ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ಮಕ್ಕಳಿಗೆ ಉತ್ಸಾಹಭರಿತ ಮಾತುಗಳನ್ನಾಡಿದರು. ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಗುಂಡುಮುಣುಗು ತಿಪ್ಪೇಸ್ವಾಮಿ, ಪಪಂ ಅಧ್ಯಕ್ಷ ಕಾವಲ್ಲಿ ಶಿವಪ್ಪನಾಯಕ, ಕ್ಷೇತ್ರ ಶಿಕ್ಷಣಾಧಿಕಾರಿ ಪದ್ಮನಾಭ ಕರಣಂ, ಜ್ಞಾನ ಭಾರತಿ ವಿದ್ಯಾಲಯದ ಆಡಳಿತಾಧಿಕಾರಿ ರಾಜು, ಸಮೂಹ ಸಂಪನ್ಮೂಲ ಅಧಿಕಾರಿ ಎಸ್.ಎಸ್. ಜಗದೀಶ್, ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಸ್. ವೆಂಕಟೇಶ್, ಪಾಪನಾಯಕ, ಸಿದ್ಧಾರಾಧ್ಯ, ಜಿನಾಬಿ, ಬಿಬಿ ಶಿವಾನಂದ, ಪಾಲ್ತೂರ್ ಶಿವರಾಜ್ ಇತರರಿದ್ದರು.

# ಯುವ ಉತ್ಸವ: ವಿವಿಧ ಸ್ಪರ್ಧೆಗೆ ಭಾಗವಹಿಸಲು ನೋಂದಣಿಗೆ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ನೆಹರು ಯುವ ಕೇಂದ್ರ ವತಿಯಿಂದ ಜಿಲ್ಲಾ ಮಟ್ಟದ ಯುವ ಉತ್ಸವ ಕಾರ್ಯಕ್ರಮ ಅಂಗವಾಗಿ ವಿವಿಧ ಸ್ಪರ್ಧೆ ಆಯೋಜಿಸಲಾಗಿದ್ದು, ಆಸಕ್ತ ಯುವ ಸಮೂಹವು ನ.29ರ ಒಳಗಾಗಿ ಗೂಗಲ್ ಶೀಟ್ ಮೂಲಕ ಅರ್ಜಿ ಸಲ್ಲಿಸಿ ನೋಂದಾಯಿಸಿಕೊಳ್ಳಬಹುದು ಎಂದು ನೆಹರು ಯುವ ಕೇಂದ್ರದ ಜಿಲ್ಲಾ ಯುವ ಅಧಿಕಾರಿ ಮೊಂಟು ಪಾತರ್ ಅವರು ತಿಳಿಸಿದ್ದಾರೆ.

**ಸ್ಪರ್ಧೆ ಮತ್ತು ಬಹುಮಾನಗಳ ವಿವರ:**

**ವಿಜ್ಞಾನ ಮೇಳ (ಸ್ಪರ್ಧಾತ್ಮಕ ಕಾರ್ಯಕ್ರಮ-ವೈಯಕ್ತಿಕ):** ಪ್ರಥಮ- ರೂ.3000, ದ್ವಿತೀಯ-ರೂ.2000, ತೃತೀಯ-ರೂ.1500.

**ವಿಜ್ಞಾನ ಮೇಳ (ಸ್ಪರ್ಧಾತ್ಮಕ ಕಾರ್ಯಕ್ರಮ-ಗುಂಪು):** ಪ್ರಥಮ - ರೂ.7000, ದ್ವಿತೀಯ-ರೂ.5000, ತೃತೀಯ-ರೂ.3000.

**ಯುವ ಬರಹಗಾರರ ಸ್ಪರ್ಧೆ:** ಪ್ರಥಮ-ರೂ.2500, ದ್ವಿತೀಯ-ರೂ.1500 , ತೃತೀಯ-ರೂ.1000.

ಯುವ ಕಲಾಕಾರರ ಸ್ಪರ್ಧೆ: ಪ್ರಥಮ-ರೂ.2500, ದ್ವಿತೀಯ-ರೂ.1500 , ತೃತೀಯ-ರೂ.1000.

**ಫೋಟೋಗ್ರಾಫಿ ಸ್ಪರ್ಧೆ ಮತ್ತು ಕಾರ್ಯಗಾರ:** ಪ್ರಥಮ-ರೂ.2500, ದ್ವಿತೀಯ-ರೂ.1500 , ತೃತೀಯ-ರೂ.1000

**ಭಾಷಣ ಸ್ಪರ್ಧೆ:** ಪ್ರಥಮ - ರೂ.5000, ದ್ವಿತೀಯ-ರೂ.2500, ತೃತೀಯ-ರೂ.1500

ಕಥೆ ಬರವಣಿಗೆ: ಪ್ರಥಮ-ರೂ.2500, >>4


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES

BOOK YOUR ADVERTISEMENTS
TO REACH MORE AUIDIENCE

**Classified Advertisements**
Examples: Job postings, Real estate listings , Matrimonial ads, Lost and found, Services (e.g., tutors, plumbers)

**Display Advertisements**
Examples: Brand promotions, Product launches, Corporate announcements

**Public Notices and Announcements**
Examples: Tender notices, Government announcements, Legal notices, Obituaries

**Recruitment Advertisements**
Examples: Company job openings, Walk-in interviews, Recruitment drives

**Health and Wellness Advertisements**
Examples: Hospitals or clinics, Medical equipment, Health supplements

**Educational Advertisements**
Examples: College admissions, Coaching center promotions, Training programs

**Event Advertisements**
Examples: Cultural programs, Exhibitions, Concerts or festivals

**Retail Advertisements**
Examples: Sales or discounts, New store openings

**Entertainment Advertisements**
Examples: Movie releases, TV show promotions, Theater events

**Political Advertisements**
Campaigns or announcements related to political parties or candidates.

**Real Estate Advertisements**
Ads for buying, selling, or renting property.

**Matrimonial Advertisements**
Personal ads for seeking marriage alliances. Examples: Bride or groom profiles, Community-specific ads

**Product Advertisements**
Examples: Electronics, Automobiles, FMCG products

contact for more information
M: 94486 33038
Email:- hampitimes@gmail.com

## ಸ್ಟುಡೆಂಟ್ ಕಾಲಂ

# ಕಷ್ಟಕ್ಕೆ ಸುಖವುಂಟು



ಒಂದಾನೊಂದು ಊರಲ್ಲಿ ರಾಮು ಎಂಬ ಹುಡುಗ ಇದ್ದ. ಅವನು ಬಡತನದ ಮನೆಯಲ್ಲಿ ಹುಟ್ಟಿದ. ಅವನ ತಂದೆ ಕಾಯಿಲೆಯಿಂದ ಮರಣ ಹೊಂದಿದ್ದರು. ತಾಯಿ ಇದ್ದಳು. ಅವಳಿಗೆ ತುಂಬಾ ವಯಸ್ಸಾಗಿತ್ತು. ಒಂದು ದಿನ ಅವನು ಶಾಲೆಗೆ ಹೋಗಿದ್ದಾಗ, ಮನೆಯಲ್ಲಿದ್ದ ತಾಯಿ ಇದ್ದಕ್ಕಿದ್ದಂತೆ ತಲೆ ತಿರುಗಿ ಬಿದ್ದಳು. ಶಾಲೆಯಲ್ಲಿದ್ದ ಅವನಿಗೆ ಒಬ್ಬ ಹುಡುಗ ಬಂದು ನಿಮ್ಮ ತಾಯಿ ತಲೆ ತಿರುಗಿ ಬಿದ್ದಿದ್ದಾಳೆ ಎಂದನು. ಅವನು ಕೂಡಲೇ ಓಡೋಡಿ ಮನೆಗೆ ಬಂದನು. ತಾಯಿಯನ್ನು ಕೂಡಲೇ ಡಾಕ್ಟರ್ ಬಳಿ ಕರೆದೊಯ್ದು ಚಿಕಿತ್ಸೆ ಕೊಡಿಸಿದ. ಅವತ್ತಿನಿಂದ ಅವನಿಗೆ ಶಾಲೆಗೆ ಹೋಗಲು ಇಷ್ಟವಾಗಲಿಲ್ಲ. ಇದನ್ನು ತಾಯಿಗೆ ತಿಳಿಸಿದ.

ನಾಲ್ಕಾರು ದಿನ ಕಳೆದ ನಂತರ ತಾಯಿ ಹುಷಾರಾದಳು. ಮಗನು ಶಾಲೆಗೆ ಹೋಗದಿರುವ ನಿರ್ಧಾರ ಅವಳನ್ನು ಕಳವಳಕ್ಕೀಡು ಮಾಡಿತ್ತು. ಮಗನನ್ನು ಕರೆದು 'ನೀನು ಶಾಲೆಗೆ ಹೋಗಬೇಕು ಮಗಾ' ಎಂದಳು. ಅದಕ್ಕೆ ಮಗನು 'ಇಲ್ಲ ನಾನು ಶಾಲೆಗೆ ಹೋಗುವುದಿಲ್ಲ' ಎಂದು ತನ್ನ ಗಟ್ಟಿ ನಿರ್ಧಾರ ತಿಳಿಸಿದ. ಇಲ್ಲ ನೀನು ಹೋಗಲೇಬೇಕೆಂದು ತಾಯಿ ಹೇಳಿದಳು. ಆಗ ಅವನು 'ನಾನು ಶಾಲೆಗೆ ಹೋದರೆ ನಮ್ಮ ಜೀವನ ನಡೆಸುವವರು ಯಾರು?, ನಿನ್ನ ಆರೋಗ್ಯ ಕಾಪಾಡುವವರು ಯಾರು? ಹಾಗಾಗಿ ನಾನು ಶಾಲೆಗೆ ಹೋಗದೇ ಕೆಲಸಕ್ಕೆ ಹೋಗಿ ಮನೆಯ ಜವಾಬ್ದಾರಿಯನ್ನು ನಡೆಸುವೆ' ಎಂದನು.

ಈ ವಯಸ್ಸಿಗೆ ಇಷ್ಟೊಂದು ಗಟ್ಟಿ ನಿರ್ಧಾರ ಬೇಡ ನೀನು ಶಾಲೆಗೆ ಹೋಗಲೇಬೇಕೆಂದು ತಾಯಿ ಒತ್ತಾಯ ಮಾಡಿದಳು. ಅಂದು ರಾತ್ರಿ ಊಟ ಮಲಗಿದಾಗ ಅವನ ತಲೆಯಲ್ಲಿ ಒಂದು ಉಪಾಯ ಹೊಳೆಯಿತು. ಅದೇನೆಂದರೆ, ದಿನಾಲೂ ಬೆಳಗ್ಗೆ ಬೇಗನೆ ಎದ್ದು ಕೆಲಸಕ್ಕೆ ಹೋಗಿ ಬಂದು ಶಾಲೆಗೆ ಹೋಗುವುದು ಎಂಬ ಉಪಾಯ ಹೊಳೆಯಿತು.



ಮರುದಿನದಿಂದ ಅವನು ಬೆಳಿಗ್ಗೆ ಬೇಗನೇ ಎದ್ದು ಕೆಲಸಕ್ಕೆ ಹೋಗಿ ಬಂದು ಶಾಲೆಗೆ ಹೋಗುತ್ತಿದ್ದನು. ಒಂದು ದಿನ ಕೆಲಸಕ್ಕೆ ಹೋಗಿ ಮನೆಗೆ ಬಂದನು. ಆಗಲೇ ಶಾಲೆಗೆ ಹೋಗಲು ಸಮಯ ಆಗಿತ್ತು. ಅವನು ಊಟವನ್ನು ಮಾಡಿ ಬೇಗನೆ ಶಾಲೆಗೆ ಹೋದನು. ಆಗಲೇ ತರಗತಿ ಶುರುವಾಗಿತ್ತು. ಶಿಕ್ಷಕರು ಪಾಠವನ್ನು ಮಾಡುತ್ತಿದ್ದರು. 'ಯಾಕೆ ಲೇಟಾಗಿ ಬಂದೆ?' ಎಂದರು ಶಿಕ್ಷಕರು. ಆಗ ಅವನು 'ಸಾರ್, ಅಮ್ಮನಿಗೆ ಗುಳಿಗೆ ತರಲು ಹೋಗಿದ್ದೆ. ಅದಕ್ಕೆ ತಡವಾಯಿತು' ಎಂದನು. ಆಗ ಇತರೆ ವಿದ್ಯಾರ್ಥಿಗಳು ಅವನು ಸುಳ್ಳು ಹೇಳುತ್ತಿದ್ದಾನೆ ಸರ್ ಎಂದರು. ಶಿಕ್ಷಕರಿಗೆ ಅವನ ನಿಜ ಸ್ಥಿತಿ ಏನೆಂದು ತಿಳಿದಿತ್ತು. ದಿನಾಲೂ ಕೆಲಸಕ್ಕೆ ಹೋಗಿ ಶಾಲೆಗೆ ಬರುವ ಅವನ ಪರಿಸ್ಥಿತಿ ತಿಳಿದಿದ್ದ ಶಿಕ್ಷಕರು ಅವನನ್ನು ಒಳಗೆ ಕರೆದುಕೊಂಡರು. ಆಗಾಗ ಅವನಿಗೆ ಅಗತ್ಯವಿದ್ದ ಲೇಖನ ಸಾಮಗ್ರಿಗಳನ್ನು ಒದಗಿಸುತ್ತಿದ್ದರು. ಶಿಕ್ಷಕರ ಪ್ರೋತ್ಸಾಹ ಹಾಗೂ ತಾಯಿಯ ಆಶೀರ್ವಾದಿಂದ ತರಗತಿಗೆ ಪ್ರಥಮ ಸ್ಥಾನವನ್ನು ಪಡೆದನು. ಮುಂದೆ ಜೀವನದಲ್ಲಿ ಒಬ್ಬ ಒಳ್ಳೆಯ ನಾಗರಿಕನಾಗಿ ತಾಯಿಯ ಆರೈಕೆ ಮಾಡಿದನು.

– ಮಂಜುನಾಥ. ಜಿ. 9ನೇ ತರಗತಿ.
ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹ.ಬೊ.ಹಳ್ಳಿ(ತಾ)

### ಪ್ರೀತಿಯ ವಿದ್ಯಾರ್ಥಿಗಳೇ ನೀವೂ ಬರೆಯಿರಿ

ಪ್ರೀತಿಯ ವಿದ್ಯಾರ್ಥಿಗಳೇ ನಿಮಗಾಗಿ ನಿಮ್ಮ ಬರವಣಿಗೆ ಕೌಶಲ ಹೆಚ್ಚಿಸಿಕೊಳ್ಳಲು **ಹಂಪಿ ಟೈಮ್ಸ್ ಸ್ಟುಡೆಂಟ್ ಕಾಲಂ ವೇದಿಕೆ** ಕಲ್ಪಿಸಿದೆ. ನೀವು ಸಣ್ಣ ಸಣ್ಣ ಕಥೆ, ಕವನಗಳನ್ನು ಬರೆಯಬಹುದು. ಇಂದೇ ಆರಂಭಿಸಿ ನೀವು ಭವಿಷ್ಯದಲ್ಲಿ ಲೇಖಕರಾಗಿ ಬೆಳೆಯಿರಿ.
ಇ-ಮೇಲ್:hampitimes@gmail.com
M: 94486 33038

### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

### ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**
**– ಜಾಹೀರಾತು ವ್ಯವಸ್ಥಾಪಕರು.**

# ವರ್ಧಿತ ಶೈಕ್ಷಣಿಕ ಕಾರ್ಯಕ್ಷಮತೆಗೆ ಧ್ಯಾನ

ವಿದ್ಯಾರ್ಥಿಗಳಿಗೆ ಧ್ಯಾನ ಅತ್ಯಗತ್ಯ ಇದು ಮನಸ್ಸನ್ನು ಶಾಂತಿಯಿಂದ ಇರಿಸಿಕೊಳ್ಳಲು ಅನುಕೂಲಕರ ಧ್ಯಾನವು ಅಧ್ಯಯನದ ಕಡೆಗೆ ಹೆಚ್ಚು ಗಮನಹರಿಸಲು ಸಹಾಯಕ ಧ್ಯಾನವನ್ನು ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವುದು ವಿದ್ಯಾರ್ಥಿಗಳ ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಪ್ರಯೋಜನಕಾರಿ ಕೆಲವೊಮ್ಮೆ ವಿದ್ಯಾರ್ಥಿಗಳು ಶಾಲಾ ಚಟುವಟಿಕೆಗಳಿಂದ ಒತ್ತಡ ಮತ್ತು ಖಿನ್ನತೆಗೆ ಒಳಗಾಗಬಹುದು ಅಧ್ಯಯನ ಪ್ರಾರಂಭಿಸುವ ಮುನ್ನ ಧ್ಯಾನ ಮಾಡಿದರೆ ಶಾಂತವಾಗಿರುತ್ತಾರೆ.

ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಕಾರ್ಯಕ್ಷಮತೆಯನ್ನು ಕಾಪಾಡಿ ಕೊಳ್ಳಲು ಇದು ಸಹಾಯಮಾಡುತ್ತದೆ ಅನೇಕ ಶಾಲೆಗಳು ತಮ್ಮ ಪಠ್ಯಕ್ರಮದಲ್ಲಿ ಧ್ಯಾನವನ್ನು ಒಳಗೊಂಡಿರುತ್ತವೆ,ವಿದ್ಯಾರ್ಥಿಗಳು ತಮ್ಮ ಅಧ್ಯಯನದ ಸಮಯದಲ್ಲಿ ಅವರ ಒತ್ತಡ ಮತ್ತು ಗೊಂದಲವನ್ನು ಕಡಿಮೆ ಮಾಡಲು ಸಹಾಯಕ.<ಧ್ಯಾನದಿಂದ ಹಲವಾರು ಉಪಯೋಗಗಳು ವಿದ್ಯಾರ್ಥಿಗಳಿಗೆ ಲಭ್ಯ ಅಂತಹ ಆಯ್ದ ಉಪಯೋಗಗಳನ್ನು ಈ ಕೆಳಕಂಡಂತೆ ನೋಡಬಹುದಾಗಿದೆ.



### 1.ವರ್ಧಿತ ಆತ್ಮವಿಶ್ವಾಸ

ನಿಯಮಿತ ಧ್ಯಾನದ ಅಭ್ಯಾಸ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ಬೆಳೆಸಲು ಮತ್ತು ಅಮೂಲ್ಯವಾದ ಕೌಶಲ್ಯಗಳನ್ನು ಕಲಿಯಲು ಸಹಾಯಕ ಇದು ಭಾವನಾತ್ಮಕವಾಗಿ ಮತ್ತು ಮಾನಸಿಕವಾಗಿ ಸದೃಢತೆ ಹೆಚ್ಚಿಸಿ ಸಾರ್ವಜನಿಕವಾಗಿ ಮಾತನಾಡಲು ಧೈರ್ಯ ನೀಡುತ್ತದೆ.

### 2.ಸುಧಾರಿತ ಏಕಾಗ್ರತೆ

ವಿದ್ಯಾರ್ಥಿಗಳಿಗೆ ತಮ್ಮ ಏಕಾಗ್ರತೆಯನ್ನು ಸುಧಾರಿಸಲು ಮತ್ತು ಹೆಚ್ಚಿಸಲು ಸಹಾಯಕ ನಿಯಮಿತ ಧ್ಯಾನದ ಅಭ್ಯಾಸ ಅಧ್ಯಯನ ಮತ್ತು ಏಕಾಗ್ರತೆಯ ಮಟ್ಟವನ್ನು ಸುಧಾರಿಸಲು ಸಹಕಾರಿ.
ವಿದ್ಯಾರ್ಥಿಗಳಲ್ಲಿ ಖಿನ್ನತೆಯನ್ನು ನಿಭಾಯಿಸಿ ಗೊಂದಲವನ್ನು ತಪ್ಪಿಸಲು ಮತ್ತು ಏಕಾಗ್ರತೆಯ ಮಟ್ಟವನ್ನು ಸುಧಾರಿಸಲು ಧ್ಯಾನವು ಸರಿಯಾದ ಮಾರ್ಗ ಇದಲ್ಲದೆ ಆಂತರಿಕ ಗೊಂದಲ ಶಾಂತಗೊಳಿಸಿ ವಿಚಲತೆ ತಪ್ಪಿಸಿ ಉತ್ತಮ ರೀತಿಯಲ್ಲಿ ಕೆಲಸ ಮಾಡಲು ಸಹಾಯ ಮಾಡುತ್ತದೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381
Scan For Digital Colourful
HAMPI TIMES E-paper

### 3.ಶೈಕ್ಷಣಿಕ ಕಾರ್ಯಕ್ಷಮತೆ ವೃದ್ಧಿ

ದಿನಂಪ್ರತಿ ಅಭ್ಯಾಸ ವಿದ್ಯಾರ್ಥಿ ಗಳ ಗೊಂದಲ ವನ್ನು ಕಡಿಮೆ ಮಾಡಲು ಮತ್ತು ಅವರ ಅಧ್ಯಯನದ ಕಾರ್ಯಕ್ಷಮತೆ ಯನ್ನು ಸುಧಾರಿಸಲು ಧ್ಯಾನ ಪರಿ ಣಾಮಕಾರಿ ಮಾರ್ಗ ವೆಂದು ವೈಜ್ಞಾನಿಕವಾಗಿ ಸಾಬೀತಾಗಿದೆ.

### 4.ವರ್ಧಿತ ಸ್ವಯಂ ಅರಿವು ಮತ್ತು ಜ್ಞಾನ

ಜ್ಞಾನವನ್ನು ಪಡೆಯಲು ಸಹಾಯಮಾಡಿ ಸ್ವಯಂ ಅರಿವನ್ನು ವೀಕ್ಷಿಸಲು ಇದು ಅನುಮತಿಸುತ್ತದೆ ನಿಯಮಿತ ಧ್ಯಾನದ ಅಭ್ಯಾಸ ಮಾಡುವ ವಿದ್ಯಾರ್ಥಿಗಳು ಸ್ವಯಂ-ಅರಿವು ಮತ್ತು ಜ್ಞಾನವನ್ನು ಬೆಳೆಸಿಕೊಳ್ಳುತ್ತಾರೆ ಇದು ವೈಯಕ್ತಿಕ ಮತ್ತು ವೃತ್ತಿಪರ ಬೆಳವಣಿಗೆಗೆ ಕಾರಣವಾಗು ತ್ತದೆ ಏಕೆಂದರೆ ವಿದ್ಯಾರ್ಥಿ ಗಳು ತಮ್ಮ ಗುರಿ ಮತ್ತು ಆಸೆಗಳನ್ನು ಹೆಚ್ಚು ಅರಿತು ಕೊಳ್ಳುತ್ತಾರೆ.

### 5.ಒತ್ತಡ ನಿಯಂತ್ರಕ

ಉತ್ತಮ ಶೈಕ್ಷಣಿಕ ಕಾರ್ಯ ಕ್ಷಮತೆಯನ್ನು ಕಾಪಾಡಿ ಕೊಳ್ಳುವುದು ವಿದ್ಯಾರ್ಥಿಗಳಿಗೆ ತುಂಬಾ ಒತ್ತಡ ಮತ್ತು ಸವಾಲಾಗಿದೆ,ಅದು ಹೆಚ್ಚು ಒತ್ತಡವನ್ನು ತೆಗೆದುಕೊಳ್ಳಲು ಒತ್ತಾಯಿಸುತ್ತದೆ ವಿದ್ಯಾರ್ಥಿಗಳು ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಧ್ಯಾನವನ್ನು ಸೇರಿಸುವುದರಿಂದ ಒತ್ತಡ ಮತ್ತು ಆತಂಕವನ್ನು ಕಡಿಮೆ ಮಾಡಲು ಸಹಾಯಮಾಡುತ್ತದೆ ಇದರಿಂದ ಶಾಂತಿ ಮತ್ತು ಸಾವಧಾನತೆ ಪಡೆಯಬಹುದು.

### 6.ಮಾನಸಿಕ ಆರೋಗ್ಯವನ್ನು ಹೆಚ್ಚಿಸುವುದು

ನಿಯಮಿತ ಧ್ಯಾನವು ಮಾನಸಿಕ ಆರೋಗ್ಯವನ್ನು ಸುಧಾರಿಸಿ ನಕಾರಾತ್ಮಕ ಆಲೋಚನೆ,ಆತಂಕವನ್ನು ಕಡಿಮೆ ಮಾಡಿ ವಿದ್ಯಾರ್ಥಿಗಳ ದಿನನಿತ್ಯದ ಜೀವನದಲ್ಲಿ ಧ್ಯಾನವನ್ನು ಅಳವಡಿಸಿಕೊಳ್ಳುವುದು ಅವರಿಗೆ ಉತ್ತಮ ಮಾನಸಿಕ ಆರೋಗ್ಯ ವನ್ನು ನೀಡುತ್ತದೆ ವಿದ್ಯಾರ್ಥಿಗಳು ಮಾನಸಿಕವಾಗಿ ಉತ್ತಮವಾಗಿದ್ದರೆ ಶೈಕ್ಷಣಿಕ ಸಾಧನೆ ಉತ್ತಮವಾಗಿರುತ್ತದೆ.

### 7.ಜ್ಞಾಪಕ ಶಕ್ತಿ ಹೆಚ್ಚುತ್ತದೆ

ಧ್ಯಾನ ಅರಿವಿನ ಕಾರ್ಯ,ಮಾಹಿತಿ ಧಾರಣೆ ಸುಧಾರಿಸಲು ಮತ್ತು ವರ್ಧಿಸಲು ಪ್ರಯತ್ನಿಸುತ್ತದೆ.

### 8.ಗುಣಮಟ್ಟದ ನಿದ್ರೆ

ದೇಹ ಮತ್ತು ಮೆದುಳು ಸರಿಯಾಗಿ ಕಾರ್ಯನಿರ್ವಹಿಸಲು ಗುಣಮಟ್ಟದ ನಿದ್ರೆ ಬಹಳ ಮುಖ್ಯ ನಿಯಮಿತ ಧ್ಯಾನ ಮಾಡುವ ವಿದ್ಯಾರ್ಥಿಗಳು ಆರೋಗ್ಯಕರ ನಿದ್ರೆಯನ್ನು ಪಡೆಯುತ್ತಾರೆ ಏಕೆಂದರೆ ಇದು ವಿದ್ಯಾರ್ಥಿಗಳ ಮನಸ್ಸು ಮತ್ತು ದೇಹವನ್ನು ವಿಶ್ರಾಂತಿ ಮಾಡಲು ಸಹಾಯ ಮಾಡಿ ಯಾವುದೇ ತೊಂದರೆ ಇಲ್ಲದೆ ಸಾಕಷ್ಟು ಗುಣಮಟ್ಟದ ನಿದ್ರೆಯನ್ನು ಪಡೆಯಲು ಅಗತ್ಯವಾಗಿರುತ್ತದೆ ನಿದ್ರೆಯ ಕೊರತೆ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು.

### 9.ಖಿನ್ನತೆ ನಿವಾರಕ

ಖಿನ್ನತೆ ಮಾನಸಿಕ ಆರೋಗ್ಯದ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ ಖಿನ್ನತೆಯನ್ನು ಕಡಿಮೆ ಮಾಡಲು ಕನಿಷ್ಠ 15-20 ನಿಮಿಷಗಳ ಕಾಲದ ಧ್ಯಾನದ ಅಭ್ಯಾಸ ಅವರ ಮನಸ್ಸನ್ನು ಶಾಂತ ಗೊಳಿಸುತ್ತದೆ.

### 10.ದುಶ್ಚಟಗಳ ಮುಕ್ತಿ ಕಾರಕ

ನವ ಯುಗದ ಕೆಲವು ಯುವಕರು ಧೂಮಪಾನ, ಮದ್ಯಪಾನ, ತಂಬಾಕು,ಕೊಕೇನ್ ಅಥವಾ ಡ್ರಗ್ಸ್ ಇತ್ಯಾದಿ ಕೆಟ್ಟ ವ್ಯಸನಗಳಿಗೆ ದಾಸರಾಗಿದ್ದು,ಇವು ಅವರ ಪ್ರಾಣವನ್ನು ಕಸಿದುಕೊಳ್ಳುತ್ತದೆ ದಿನನಿತ್ಯದ ಜ್ಞಾನದ ಅಭ್ಯಾಸ ಇವುಗಳ ಚಟದಿಂದ ಮುಕ್ತಿ ನೀಡುತ್ತದೆ ಅಥವಾ ಹವ್ಯಾಸವಾಗದಂತೆ ತಡೆಯುತ್ತದೆ.

ಧ್ಯಾನವು ದಿನನಿತ್ಯ ಅಭ್ಯಾಸ ಮಾಡಬಹುದಾದ ಒಂದು ಕಲೆ ಇದರಲ್ಲಿ ಹಲವು ಶೈಲಿಗಳು ಮತ್ತು ಪ್ರಯೋಜನಗಳಿವೆ ಅಭ್ಯಾಸಕ್ಕೆ ಯಾವುದೇ ಅಲಂಕಾರಿಕ ಸಲಕರಣೆಗಳ ಅಗತ್ಯವಿಲ್ಲ ಕೇವಲ ಮೃದುವಾದ ಮತ್ತು ಆರಾಮದಾಯಕವಾದ ಚಾಪೆ/ಮ್ಯಾಟ್ ಇತ್ಯಾದಿ...ಶಾಂತವಾದ ಕೊಠಡಿ. ಧ್ಯಾನವು ಬಾಳಿಕೆ ಬರುವ ದೈಹಿಕ ಮತ್ತು ಮಾನಸಿಕ ಆರೋಗ್ಯ ಪ್ರಯೋಜನಗಳನ್ನು ಹೊಂದಿದೆ. ದೀರ್ಘಕಾಲದ ಆರೋಗ್ಯ,ಮಾನಸಿಕ ತೊಂದರೆಗಳಿಂದ ಬಳಲುತ್ತಿ ರುವವರು ವೈದ್ಯರ ಸಲಹೆ ಹಾಗೂ ಧ್ಯಾನದ ಇನ್ನು ಹೆಚ್ಚಿನ ಲಾಭ ಗಳಿಗಾಗಿ ಯೋಗ ಶಿಕ್ಷಕರೊಂದಿಗೆ ಚರ್ಚಿಸಿ ಮುಂದುವರೆಯುವುದು ಸೂಕ್ತ.

# ಮಾತು ಖಡ್ಗಕ್ಕಿಂತ ಹರಿತವಾದ ಅಸ್ತ್ರ

ನಡೆ-ನುಡಿ ಒಂದಾಗಿರಬೇಕು ಎನ್ನುವುದು ಇಂದು ನಡೆಯಲ್ಲಿ ನುಡಿ, ನುಡಿಯಲ್ಲಿ ನಡೆ ಇರದಿದ್ದರೂ ಹೊಂದಾಣಿಕೆ ಮಾಡಿಕೊಳ್ಳಬೇಕು ಎಂಬಂತಾಗಿದೆ. ಲೇಖನಿ ಖಡ್ಗಕ್ಕಿಂತ ಹರಿತವಾದುದು ಎಂಬಂತೆ 'ಮಾತು ಖಡ್ಗಕ್ಕಿಂತ ಹರಿತವಾದ ಅಸ್ತ್ರವಾಗಿದೆ'. ಇಂದು ಜೀವನ, ಜಗತ್ತು ಮಾತಿನ ಮೇಲೆಯೇ ನಡೆಯುತ್ತಿದೆ. ಬಹುತೇಕ ಜನರಿಗೆ ಮಾತೇ ಬಂಡವಾಳ. ಮಂತ್ರದಿಂದ ಮಾವಿನ ಕಾಯಿ ಉದುರುವುದೇ? ಎನ್ನುವ ಪ್ರಶ್ನೆಗೆ ಮಾತಿಗೆ ಮರುಳಾಗದವರಿಲ್ಲ. ಮಾತಿನಿಂದ ಜಗತ್ತನ್ನೇ ಗೆಲ್ಲಬಹುದು. ಅಧಿಕಾರ, ಅಂತಸ್ತು ಪಡೆಯಬಹುದೆಂದು ಸಾಬೀತಾಗಿದೆ. ಒಂದನಾಡದೆ ಹನ್ನೊಂದಾಡುವ ಹವ್ಯಾಸ, ಎಲ್ಲದರಲ್ಲಿ ಗತ್ತು-ಗತ್ತುಗಾರಿಕೆ ಕಬಳಿಸುವಿಕೆ ಹೇಳುವುದೊಂದು, ಮಾಡುವುದು ಮತ್ತೊಂದು ನಿರಂತರವಾಗಿ ನಡೆದೇ ಇದೆ. ಸಮಾಜದಲ್ಲಿ ನಾಟಕೀಯತೆ ಬೃಹದಾಕಾರವಾಗಿ ಬೆಳೆದು ನಿಂತಿದೆ. ಯಾವುದನ್ನು ನಂಬಬೇಕು ಯಾವುದನ್ನು ಬಿಡಬೇಕು ಎಂಬ ಗೊಂದಲ ಪದೇ ಪದೇ ಎದುರಾಗುತ್ತಿದೆ. ಇದಕ್ಕೆ ಮುಖ್ಯ ಕಾರಣ ನಡೆ-ನುಡಿಯೊಳಗೆ ಎದ್ದಿರುವ ಗೊಂದಲ. ಮಾತಿನ ಮೇಲೆ ಹಿಡಿತವಿಲ್ಲ. ಶುಚಿತ್ವವಿಲ್ಲ ಜವಾಬ್ದಾರಿ ಇಲ್ಲ. ಮಾತಿನ ಮೇಲೆ ನಿಲ್ಲುವವರಿಲ್ಲ. ಸರಿಯಾಗಿ ಇತರರೊಡನೆ ಮಾತನಾಡದಷ್ಟು ಮುದುರಿಕೊಂಡಿದ್ದಾರೆ. ಸಮಾಜದಲ್ಲಿ ಮತ್ತು ಬದುಕಿನಲ್ಲಿ ಶಾಂತಿ ನೆಮ್ಮದಿ, ಸುಖ, ಸಮೃದ್ಧಿ ದೊರೆಯುವಂತೆ ಮಾಡಲು 12ನೇ ಶತಮಾನದಲ್ಲಿ ಬಸವೇಶ್ವರರು ಸಕಲ ಜೀವಾತ್ಮರಿಗೆ ಲೇಸನ್ನು ಬಯಸಿದರು. ಅದರಂತೆ ನಡೆ-ನುಡಿ ಬೆಳೆಸಿಕೊಂಡರು. ಅವರ ಒಂದೊಂದು ವಚನ ಮಾನವ ಪ್ರೀತಿಯ ಪ್ರತೀಕವಾಗಿರುವಂತೆ ನಡೆಯೊಳಗೆ ಏಕತೆ ಸಾಧಿಸಲು ಪ್ರೇರಕ ಶಕ್ತಿಯಾಗಿವೆ. ಅಷ್ಟೇ ಅಲ್ಲ ಒಲ್ಲದ ಮಾತಿನಿಂದ ತೆರೆಗೆಲೆಯುಂತಾಗಿರುವ ಬದುಕಿಗೆ ಪ್ರೇರಣೆ ನೀಡುತ್ತವೆ. ನುಡಿಗೆ ನಡೆಯಾಗಿ ಉಳಿದಿವೆ



ರೇಖಾ ಪಾಟೀಲ
ಲೇಖಕಿ, ರಾಯಚೂರು
Scan For Digital Colourful
HAMPI TIMES E-paper

**"ತನುಶುದ್ಧ ಮನಶುದ್ಧ**
**ಭಾವ ಶುದ್ಧವಾದವರ**

## ವಚನೋತ್ಸವ

**ಎನಗೊಮ್ಮೆ ತೋರಾ**
**ನಡೆಯಲ್ಲ ಸದಾಚಾರ, ನುಡಿಯೆಲ್ಲ ಶಿವಾಗಮ**
**ನಿತ್ಯಶುದ್ಧವಾದವರ, ಎನಗೊಮ್ಮೆ ತೋರಾ**
**ನಿಜಶರಣರ ಎನಗೊಮ್ಮೆ ತೋರಾ ಚೆನ್ನಮಲ್ಲಿಕಾರ್ಜುನ"**

**ನುಡಿಯುವುದು ವಚನ ಕೊಡುವುದು ಪ್ರಮಾಣ ಮಾಡುವುದು** ಬಲು ಸುಲಭ ಆದರೆ ಅದನ್ನು ಈಡೇರಿಸುವುದು ತಪಸ್ಸಿನಷ್ಟೇ ಕಷ್ಟ. ಆದ್ದರಿಂದ ವಚನ ಕೊಡುವಾಗ ಹೃದಯದಿಂದ ಭಾವಿಸಿ ವಿವೇಕದಿಂದ ಯೋಚಿಸಿ ಕೊಡಬೇಕು. ಈಡೇರಿಸಬೇಕು. ಅಂತಹ ಸವಾಲನ್ನು ಮನಗಂಡ ಅಕ್ಕಮಹಾದೇವಿ ನಿತ್ಯ ಶುದ್ಧವಾದವರ ಎನಗೊಮ್ಮೆ ತೋರಾ ಎಂದು ಸವಾಲು ಹಾಕಿದ್ದಾಳೆ.

ಇಂತಹ ಅಕ್ಕ ಬಸವಣ್ಣನನ್ನು ಕಲ್ಯಾಣದಲ್ಲಿ ಕಂಡ ಮೇಲೆ ಆತನ ನಡೆ-ನುಡಿ ಒಂದಾದ ಪರಿಯನ್ನು ಮೆಚ್ಚಿ ತನ್ನ ತಂದೆ ಬಸವಣ್ಣ ಎಂದು ಕೊಂಡಾಡಿದ್ದಾಳೆ.

**"ಅಂಗದಲ್ಲಿ ಆಚಾರವ ತೋರಿದ:**
**ಆ ಆಚಾರವೇ ಲಿಂಗವೆಂದರುಹಿದ.**
**ಪ್ರಾಣದಲ್ಲಿ ಅರಿವ ನೆಲೆಗೊಳಿಸಿದ:**
**ಆ ಅರಿವೇ ಜಂಗಮವೆಂದು ತೋರಿದ.**
**ಚೆನ್ನಮಲ್ಲಿಕಾರ್ಜುನನ ಹೆತ್ತ ತಂದೆ ಸಂಗನ ಬಸವಣ್ಣನು**
**ಏನಗೀ ಕ್ರಮವನರುಹಿದನಯ್ಯ ಪ್ರಭುವೇ."**

ಇಷ್ಟಲಿಂಗ ಸಂಬಂಧವಾದ ಆಚಾರಗಳಿಂದ ಕಾಯವನ್ನೇ ಕೈಲಾಸ ಮಾಡಿಕೊಳ್ಳಬಹುದು. ಎಂದು ಅಕ್ಕಮಹಾದೇವಿ ಈ ವಚನದಲ್ಲಿ ಹೇಳಿದ್ದಾಳೆ.

**"ಎನ್ನ ನಡೆಯೊಂದು ಪರಿ**
**ಎನ್ನ ನುಡಿಯೊಂದು ಪರಿ**
**ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ.**
ನುಡಿಗೆತಕ್ಕ ನಡೆಯ ಕಂಡಡೆ ಕೂಡಲಸಂಗಮದೇವನೊಳ ಗಿಪ್ಪನಯ್ಯಾ"

ಎಂದು ಬಸವಣ್ಣನವರು ತಮ್ಮ ಅಂತರಂಗವನ್ನು ಬಹಿರಂಗಗೊಳಿಸಿ ನಡೆ-ನುಡಿ ಕತ್ತಿಯ ಮೇಲಿನ ನಡಿಗೆ ಎಂದು ನಿರೂಪಿಸಿದ್ದಾರೆ.

**"ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದಡೆ**
**ಹಿಡಿದಿದ್ದ ಲಿಂಗವು ಘಟಸರ್ಪನಯ್ಯಾ. ನುಡಿಯಲುಬಾರದು**
**ನಡೆಯಲುಬಾರದು**
**ಲಿಂಗದೇವನೆ ದಿಬ್ಯವೋ ಅಯ್ಯಾ**
**ಬಡವನ ಕೋಪವು ಅವುಡಿಗೆ ಮೃತ್ಯುವಾದಂತೆ**
**ಕಡೆಗೆ ದಾಂಟದು ಕಾಣಾ ಕೂಡಲಸಂಗಮದೇವಾ."**

ಬಸವಣ್ಣನವರು ನುಡಿ ಒಳಗಾಗಿ ನಡೆಯದಿದ್ದರೆ ಕೂಡಲಸಂಗಮ ದೇವನೆಂತೊಲಿವನಯ್ಯ ಎಂದು ಪ್ರಶ್ನಿಸಿದರು. ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರುದ ಲಿಂಗ ಘಟಸರ್ಪವಯ್ಯ ಎಂದು ಸ್ಪಷ್ಟಪಡಿಸಿದರು. "ಭಕ್ತಿ ಸುಭಾಷೆಯ ನುಡಿಯ ನುಡಿವೆ ನುಡಿದಂತೆ ನಡೆವೆ"ಎಂದು ಹೇಳುವ ಮೂಲಕ ನಡೆ-ನುಡಿ ಸಿದ್ಧಾಂತವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವ ದಾರಿಯನ್ನು ತೋರಿದ್ದಾರೆ.

**"ಆದ್ಯರ ವಚನ ಪರುಷ ಕಂಡಯ್ಯ**
**ಅಧರಕ್ಕೆ ಕಹಿ, ಉದರಕ್ಕೆ** ಸಿಹಿ
ಕೂಡಲಸಂಗಮ ಶರಣರ ವಚನ ಬೇವ ಸವಿದಂತೆ "

ಬೇವು ಕಹಿಯಾದರೂ ಆರೋಗ್ಯಕ್ಕೆ ಅಮೃತ. ಹಾಗಾಗಿ ನಡೆ ಕಷ್ಟವಾದರೂ ಅದು ಮುಂದೆ ನಮ್ಮ ಜೀವನಕ್ಕೆ ಸಂತೃಪ್ತಿ ಸಮೃದ್ಧಿ ತರುತ್ತದೆ.

**"ಆನೆಯನೇರಿಕೊಂಡು ಹೋದಿರೇ ನೀವು**
**ಕುದುರೆನೇರಿಕೊಂಡು ಹೋದಿರೇ ನೀವು**
**ಕುಂಕುಮ ಕಸ್ತೂರಿಯ ಹೂಸಿಕೊಂಡು ಹೋದಿರೇ ಅಣ್ಣಾ**
**ಸತ್ಯದ ನಿಲವನರಿಯದೆ ಹೋದಿರಲ್ಲಾ**
**ಸದ್ಗುಣವೆಂಬ ಫಲವ ಬಿತ್ತದೆ ಬೆಳೆಯದೆ ಹೋದಿರಲ್ಲಾ**
**ಅಹಂಕಾರವೆಂಬ ಸದಮದ ಗೆಜವೇರಿ**
**ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ!**
**ನಮ್ಮ ಕೂಡಲಸಂಗಮದೇವ ನರಿಯದೆ**
**ನರಕಕ್ಕೆ ಭಾಜನವಾದಿರಲ್ಲಾ"**

ಇತ್ತೀಚಿನ ದಶಕಗಳಲ್ಲಿ ಎಲ್ಲವೂ ನಾನು ನನ್ನಿಂದಲೇ ಎಂದು ಪ್ರದರ್ಶಿಸಲು ಸಿರಿ ಸಂಪತ್ತಿನ ಬೆನ್ನತ್ತಿ ಆಡಂಬರ ಜೀವನ, ಅದ್ದೂರಿ ಮನೆ, ಮದುವೆ, ಐಶಾರಾಮಿ ವಸ್ತುಗಳಿಗೆ ಮನಸೋತು ಮನಶಾಂತಿ, ಆರೋಗ್ಯ ನೆಮ್ಮದಿ, ಕೆಡಿಸಿಕೊಂಡು ನೈತಿಕ ಪ್ರಜ್ಞೆಯನ್ನು ಕಳೆದುಕೊಂಡು ಜೀವನ ಮತ್ತು ಸುತ್ತಲಿನ ಪರಿಸರವನ್ನು ಹಾಳು ಮಾಡಿಕೊಳ್ಳುತ್ತಿದ್ದೇವೆ. ನಾನು ಎಂಬ ಅಹಂಕಾರದಲ್ಲಿ ಮದಗಜವೇರಿದ ನಾವು ಸತ್ಯದ ನಿಲುವಿನಿಂದ ಸದ್ಗುಣದ ಫಲವ ಬಿತ್ತಿ ಬೆಳೆದವರು ಎನ್ನುವುದನ್ನು ಈ ವಚನದ ಮೂಲಕ ಬಸವಣ್ಣನವರು ತಿಳಿಸಿದ್ದಾರೆ.

ಹೀಗೆ ಸಮಾಜ ಸುಧಾರಕರು, ದಾರ್ಶನಿಕರು, ಸಂತರು ನಿರ್ಭಯದಿಂದ ಲೋಕದ ಅಭಿವೃದ್ಧಿಗಾಗಿ ಅಂದು ಇಂದು ಎಂದೆಂದಿಗೂ ಬದುಕಿ ಬಾಳಿದವರು ಇಂದು ಅವರ ತತ್ವಗಳು ನಮ್ಮೊಂದಿಗೆ ಇಂತಹ ದೊಡ್ಡ ವ್ಯಕ್ತಿತ್ವದ ವ್ಯಕ್ತಿಗಳಿಗಾಗಿ ಅವರ ಋಣ ತೀರಿಸಲು ನಡೆ-ನುಡಿ ಒಂದಾಗುವುದು ಅತ್ಯಗತ್ಯ. ಅನಿವಾರ್ಯ. ಇಲ್ಲವೆಂದರೆ ಮಾನಸಿಕ ನರಕ ಕೋರ್ಟು, ಜಗಳ, ಸ್ವಹಿಂಸೆ, ಇವೆಲ್ಲ ಅನಿವಾರ್ಯ. ಅಂತಿಮವಾಗಿ ಆಯ್ಕೆ ಅವರವರಿಗೆ ಬಿಟ್ಟಿದ್ದು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಕಾರ್ತಿಕ । ಸಂವತ್ಸರ: ಕ್ರೋಧಿ

26–11–2024 –ಮಂಗಳವಾರ

| | |
|---|---|
| ತಿಥಿ | : ಏಕಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಹಸ್ತ |
| ಯೋಗ | : ಪ್ರೀತಿ |
| ಕರಣ | : ಭವ |
| ಸೂರ್ಯೋದಯ | : 06:49:24 |
| ಸೂರ್ಯಾಸ್ತ | : 17:39:10 |
| ರಾಹು ಕಾಲ | : 14:57–16:18 |
| ಯಮಘಂಡ ಕಾಲ | : 09:32–10:53 |
| ಗುಳಿಕ ಕಾಲ | : 12:14–13:36 |

## ತುಂಗಭದ್ರಾ ನೀರಿನ ಮಟ್ಟ



ಸೋಮವಾರ : 25–11–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1630.33 ಅಡಿ |
| ಒಳ ಹರಿವು | 3359 ಕ್ಯುಸೆಕ್ |
| ಹೊರ ಹರಿವು | 7039 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 95.314 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1596.07 ಅಡಿ |
| ಒಳ ಹರಿವು | 506 ಕ್ಯುಸೆಕ್ |
| ಹೊರ ಹರಿವು | 10461 ಕ್ಯುಸೆಕ್ |
| ಸಾಮರ್ಥ್ಯ | 16.855 ಟಿಎಂಸಿ |

# ಕರ್ನಾಟಕ ಏಕೀಕರಣ ಹೋರಾಟ ಕನ್ನಡಿಗರ ಅಸ್ಮಿತೆ: ಡಾ.ಕೆ.ರವೀಂದ್ರ



**ಹಂಪಿ ಟೈಮ್ಸ್ ಕೊಟ್ಟೂರು**

ರಾಜ್ಯ ಸೇರಿ ಪಕ್ಕದ ರಾಜ್ಯಗಳಲ್ಲಿಯೂ ಹರಿದು ಹಂಚಿ ಹೋಗಿದ್ದ ಕನ್ನಡ ಭಾಷೆ ನೆಲಗಳನ್ನು ಒಗ್ಗೂಡಿಸುವ ಉದ್ದೇಶದಿಂದ ನಡೆದ ಕರ್ನಾಟಕ ಏಕೀಕರಣ ಹೋರಾಟ ಕನ್ನಡಿಗರಿಗದು ಎಂದಿಗೂ ಅಸ್ಮಿತೆಯಾಗಿದೆ ಎಂದು ಹಿರಿಯ ವಿದ್ವಾಂಸ ಡಾ.ಕೆ. ರವೀಂದ್ರನಾಥ ಹೇಳಿದರು.

ಪಟ್ಟಣದ ಡಾ.ಎಚ್.ಜಿ.ರಾಜ್ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕ ಆಯೋಜಿಸಿದ್ದ 69ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಕರ್ನಾಟಕ ಏಕೀಕರಣದ ಮಹತ್ವ ಕುರಿತು ಶನಿವಾರ ವಿಶೇಷ ಉಪನ್ಯಾಸ ನೀಡಿದರು. ಬ್ರಿಟಿಷ್ ಆಡಳಿತದಲ್ಲಿ 20ಕ್ಕೂ ಹೆಚ್ಚು ಪ್ರಾಂತ್ಯಗಳಾಗಿ ಕನ್ನಡ ನಾಡು ಹರಿದು ಹಂಚಿ ಹೋಗಿತ್ತು. ನಮ್ಮ ಭಾಷಿಕರೇ ಅಧಿಕವಾಗಿದ್ದ ಪ್ರದೇಶಗಳಲ್ಲಿದ್ದ ಕನ್ನಡಿಗರಿಗೆ ಭಾಷಿಕವಾಗಿ, ಸಾಮಾಜಿಕವಾಗಿ, ಆಡಳಿತಾತ್ಮಕವಾಗಿ ಅನೇಕ ವಿಭಿನ್ನ ಸಮಸ್ಯೆಗಳು ಎದುರಾಗಿದ್ದವು. ಇಂತಹ ಸಮಸ್ಯೆಗಳಿಗೆ ಮುಕ್ತಿ ಕಾಣಿಸುವ ಉದ್ದೇಶಕ್ಕಾಗಿ, ಕನ್ನಡ ಭಾಷೆಯ ಆಧಾರದ ಮೇಲೆ ಅಖಂಡ ಕರ್ನಾಟಕ ನಾಡನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ನಾಡಿನ ಸಾಹಿತಿಗಳು, ಕಲಾವಿದರು, ಪತ್ರಿಕೆಗಳು, ಸಂಘ ಸಂಸ್ಥೆಗಳು ನಡೆಸಿದ ಏಕೀಕರಣ ಹೋರಾಟ ಕನ್ನಡಿಗರ ಅಸ್ಮಿತೆಯಾಗಿದೆ ಎಂದರು.

ಕರ್ನಾಟಕ ಸಾಂಸ್ಕೃತಿಕ ನಾಡಿನ ಅರಸರು ಬಹು ದೊಡ್ಡ ಕೊಡುಗೆಯನ್ನೇ ನೀಡಿದ್ದಾರೆ. ಏಕೀಕರಣದ ನಂತರ ಭಾಷಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಕನ್ನಡದ ಪ್ರತಿನಿಧಿಕತೆಯನ್ನು ಪುನರಾವಲೋಕನ ಮಾಡಿಕೊಳ್ಳುವುದ ಅವಶ್ಯವಾಗಿದೆ.

ರಾಜ್ಯದಲ್ಲಿ ನಡೆದಿದ್ದ ಏಕೀಕರಣ ಹೋರಾಟಕ್ಕೆ ಬೆಂಬಲವಾಗಿ ಕೊಟ್ಟೂರಿನಲ್ಲಿ ಮಾಜಿ ಸಚಿವ ದಿ. ಎಂಎಂಜೆ ಸದ್ಯೋಜಾತ, ದಿ.ಅ.ನಂಜಪ್ಪ ಅವರು ದೊಡ್ಡ ಸಂಘಟನೆ ಮಾಡಿ ಹೋರಾಟ ನಡಿಸಿದ್ದರು ಎಂದು ಹೋರಾಟಗಾರರನ್ನು ಸ್ಮರಿಸಿದರು.

ತಾಲೂಕು ಕಸಾಪ ಅಧ್ಯಕ್ಷ ದೇವಮನಿ ಕೊಟ್ರೇಶ ಮಾತನಾಡಿ, ಈ ಬಾರಿಯ ರಾಜ್ಯೋತ್ಸವ ಸಂದರ್ಭಕ್ಕೆ ಐವರು ದಾನಿಗಳಿಂದ ದತ್ತಿ ಪಡೆದಿದ್ದು, ಮುಂದಿನ ಎರಡು ವರ್ಷದಲ್ಲಿ 50 ದಾನಿಗಳಿಂದ ಕಸಾಪಕ್ಕೆ ದತ್ತಿ ಪಡೆಯುವ ಗುರಿ ಹೊಂದಿದೆ ಎಂದರು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಸಾಪ ಅಧ್ಯಕ್ಷ ನಿಷ್ಠಿ ರುದ್ರಪ್ಪ ಮಾತನಾಡಿ, ಅಖಂಡ ಜಿಲ್ಲೆಯಲ್ಲಿ ಎಲ್ಲ ಘಟಕಗಳು ರಚನಾತ್ಮಕವಾಗಿ ಕಾರ್ಯ ನಿರ್ವಹಿಸುತ್ತಿವೆ. ಕೊಟ್ಟೂರು ಘಟಕದ ಅಧ್ಯಕ್ಷರಾದಿಯಾಗಿ ಎಲ್ಲ ಪದಾಧಿಕಾರಿಗಳ ಶ್ರಮ ಶ್ಲಾಘನೀಯ. ಐದು ದತ್ತಿ ದಾನಿಗಳನ್ನು ಈ ಬಾರಿ ಕಸಾಪಕ್ಕೆ ನೀಡಿರುವ ತಾಲೂಕು ಅಧ್ಯಕ್ಷರು ಇನ್ನೂ ಹೆಚ್ಚು ಕಾರ್ಯ ನಿರ್ವಹಿಸಲಿ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ವರ್ತಕ ಪಿ.ಶ್ರೀಧರಶೆಟ್ಟಿ ಮಾತನಾಡಿದರು. ದತ್ತಿ ದಾನಿಗಳಾದ ಬಿಎಸ್ ಕೊಟ್ರೇಶ್, ಜೆ.ಎಂ. ಧನಂಜಯ, ಪಿ.ಶ್ರೀಧರಶೆಟ್ಟಿ, ಕೆ.ಎಸ್.ಈಶ್ವರಗೌಡರನ್ನು ಗೌರವಿಸಲಾಯಿತು. ಚಿತ್ರ ನಟ ಬಿ.ಎಚ್.ಸುದರ್ಶನ, ರಾಷ್ಟ್ರ ಮಟ್ಟದ ಖೋಖೋ ಆಟಗಾರ್ತಿ ಜಿ.ಪ್ರತಿಕ್ಷಾ, ಎಂಎಂ ನಟರಾಜ ಅವರನ್ನು ಸನ್ಮಾನಿಸಲಾಯಿತು. ಪ.ಪಂ.ಉಪಾಧ್ಯಕ್ಷ ಜಿ.ಸಿದ್ದಯ್ಯ, ಡಿಎಸ್‌ಎಸ್ ಮುಖಂಡ ಬದ್ದಿ ಮರಿಸ್ವಾಮಿ, ಪ್ರಾಚಾರ್ಯ ಪ್ರಶಾಂತಕುಮಾರ ಇದ್ದರು.

ಕಸಾಪ ಕಾರ್ಯದರ್ಶಿ ಅರವಿಂದ ಬಸಾಪುರ ಪ್ರಾಸ್ತಾವಿಕ ಮಾತನಾಡಿದರು. ಶಾಲಾ ವಿದ್ಯಾರ್ಥಿಗಳು ಕನ್ನಡ ಪರ ಹಾಡುಗಳಿಗೆ ನೃತ್ಯ ಪ್ರದರ್ಶಿಸಿದರು.

ಗೌರವ ಖಜಾಂಚಿ ಈಶ್ವರಪ್ಪ ತುರಕಾಣಿ, ಪದಾಧಿಕಾರಿ ಅಜ್ಜಣ್ಣ, ಬಿ.ಎಂ.ಗಿರೀಶ್ ನಿರ್ವಹಿಸಿದರು.

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038

# ಕಾರ್ಮಿಕ ಇಲಾಖೆ ವಿವಿಧ ಸೌಲಭ್ಯಗಳ ತರಬೇತಿ ಕಾರ್ಯಾಗಾರ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಮಾಹಿತಿ ಶಿಕ್ಷಣ ಮತ್ತು ಸಂವಹನ (ಐಇಸಿ) ಚಟುವಟಿಗಳಡಿ ಕಟ್ಟಡ ಕಾರ್ಮಿಕ ಸಂಘಗಳಿಗೆ ಕಾರ್ಯಾಗಾರದಲ್ಲಿ ಮಂಡಳಿಯ ಹೊಸ ತಂತ್ರಾಂಶದಲ್ಲಿ ಕಟ್ಟಡ ಕಾರ್ಮಿಕರ ನೋಂದಣಿ, ನವೀಕರಣ ಹಾಗೂ ವಿವಿಧ ಸೌಲಭ್ಯಗಳು, ಎಸ್‌ಎಸ್‌ಪಿ ಪೋರ್ಟಲ್ ಮೂಲಕ ಶೈಕ್ಷಣಿಕ ಧನಸಹಾಯ ಅರ್ಜಿ ಸಲ್ಲಿಸಲು ಕಾರ್ಮಿಕ ಅಧಿಕಾರಿಗಳು ಸೂರಪ್ಪ ಡಂಬುರಮತ್ತುರ ತಿಳಿಸಿದರು.

ನಗರದ ಕಾರ್ಮಿಕ ಅಧಿಕಾರಿಗಳ ಕಚೇರಿಯಲ್ಲಿ ತರಬೇತಿ ಕಾರ್ಯಾಗಾರದಲ್ಲಿ ಅಧ್ಯಕ್ಷತೆ ವಹಿಸಿ ಸೋಮವಾರ ಮಾತನಾಡಿದರು. ಕಾರ್ಮಿಕ ಇಲಾಖೆ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ನೋಂದಣಿ, ನವೀಕರಣ ಹಾಗೂ ವಿವಿಧ ಸೌಲಭ್ಯಗಳು ಕುರಿತು ತರಬೇತಿ ಕಾರ್ಯಾಗಾರದಲ್ಲಿ ಸಮರ್ಪಕ ಮಾಹಿತಿ ಪಡೆದು ಯಶಸ್ವಿಯಾಗಿ ಸದುಪಯೋಗ ಪಡೆದುಕೊಳ್ಳುವಂತೆ ಸೂಚಿಸಿದರು. ಕಾರ್ಯಾಗಾರದಲ್ಲಿ ತರಬೇತುದಾರರಾದ ಉಮಾಶಂಕರ್ ಕಟ್ಟಡ ಕಾರ್ಮಿಕರ ಇ–ಕಾರ್ಡ್ ಪಡೆಯುವ ಬಗ್ಗೆ ಮಾಹಿತಿ ನೀಡಿದರು. ಕಟ್ಟಡ ಕಾರ್ಮಿಕರಾಗಿ ನೋಂದಾಯಿಸಿಕೊಳ್ಳುವ ಬಗ್ಗೆ ಸಿಂಧುಕುಮಾರಿ ತರಬೇತಿ ನೀಡಿದರು, ಅಮರಪ್ಪ ನಡುವಿನಮನಿ ಹಾಗೂ ಅಕಾಶ್ ಹಿರೇಮಠ್ ಇವರು ನೋಂದಾಯಿತ ಕಟ್ಟಡ ಕಾರ್ಮಿಕರು ಗುರುತಿನ ಚೀಟಿ ನವೀಕರಿಸಿಕೊಳ್ಳುವ ಬಗ್ಗೆ. ಸಿಬ್ಬಂದಿ ಪೂಜಾರಿ ತುರುಮಂದೆಪ್ಪ ಕಟ್ಟಡ ಕಾರ್ಮಿಕರಿಗೆ ದೊರೆಯುವ ವಿವಿಧ ಸೌಲಭ್ಯಗಳು ಸೇರಿದಂತೆ ಎಸ್‌ಎಸ್‌ಪಿ ಪೋರ್ಟಲ್ ಮೂಲಕ ಶೈಕ್ಷಣಿಕ ಧನ ಸಹಾಯ ಅರ್ಜಿ ಸಲ್ಲಿಸುವ ಬಗ್ಗೆ ತರಬೇತಿ ನೀಡಿದರು. ಕಾರ್ಯಾಗಾರದಲ್ಲಿ ವಿಜಯನಗರ ಜಿಲ್ಲೆಯ ಕಟ್ಟಡ ಕಾರ್ಮಿಕ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

# ಸುರಕ್ಷಿತ ಕೆಲಸದ ವಾತಾವರಣ ಮಹಿಳೆಯರ ಮೂಲಭೂತ ಹಕ್ಕು

## ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷರಾದ ನ್ಯಾ. ಕೆ.ಜಿ.ಶಾಂತಿ ಹೇಳಿಕೆ

**ಹಂಪಿ ಟೈಮ್ಸ್ ಬಳ್ಳಾರಿ:**

ಮಹಿಳೆಯರು ತಾವು ಕೆಲಸ ನಿರ್ವಹಿಸುವ ಸ್ಥಳದಲ್ಲಿ ಸುರಕ್ಷಿತ ಕೆಲಸದ ವಾತಾವರಣ ಹೊಂದುವುದು ಮಹಿಳೆಯರ ಮೂಲಭೂತ ಹಕ್ಕಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ ಅವರು ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಜಿಲ್ಲಾ ವಕೀಲರ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಅಂತರಾಷ್ಟ್ರೀಯ ಮಹಿಳಾ ಹಿಂಸಾಚಾರ ವಿರೋಧಿ ದಿನಾಚರಣೆ ಅಂಗವಾಗಿ ನಗರದ ಹೊಸ ಜಿಲ್ಲಾ ನ್ಯಾಯಾಲಯದ ವಿಸಿ ಸಭಾಂಗಣದಲ್ಲಿ "ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆಗಟ್ಟುವ ಅಧಿನಿಯಮ"ದ ಕುರಿತು ಸೋಮವಾರ ಆಯೋಜಿಸಿದ್ದ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೆಲಸದ ಸ್ಥಳದಲ್ಲಿ ಪುರುಷರು ಮತ್ತು ಮಹಿಳೆಯರಿಗೆ ಸಮಾನ ಅವಕಾಶವಿದೆ. ಆಡು ಮುಟ್ಟದ ಸೊಪ್ಪಿಲ್ಲ, ಮಹಿಳೆಯರಿಲ್ಲದ ಕ್ಷೇತ್ರವಿಲ್ಲ. ಹಾಗಾಗಿ ಮಹಿಳೆಯರನ್ನು ಮೌಲ್ಯಯುತ ಸಹೋದ್ಯೋಗಿಗಳಂತೆ ಕಾಣಬೇಕು ಎಂದರು.

ಮಹಿಳೆಯರಿಗೆ ಸುರಕ್ಷಿತ ಕೆಲಸದ ಸ್ಥಳಗಳನ್ನು ರಚಿಸುವ ಉದ್ದೇಶದಿಂದ ರೂಪಿಸಲಾದ ಕೆಲಸದ ಸ್ಥಳದಲ್ಲಿ ಮಹಿಳೆಯರ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯ್ದೆ (POSH ಕಾಯಿದೆ, 2013) ಎಂಬ ವಿಶೇಷ ಶಾಸನ ನೀಡಿದೆ. ಇದರ ಅರಿವು ಮಹಿಳೆಯರು ಹೊಂದಬೇಕಿದೆ ಎಂದು ಅವರು ತಿಳಿಸಿದರು.



ಲೈಂಗಿಕ ಕಿರುಕುಳವು ನೊಂದವರ ದೈಹಿಕ ಮತ್ತು ಮಾನಸಿಕ ಆರೋಗ್ಯ, ಒಟ್ಟಾರೆ ಯೋಗಕ್ಷೇಮದ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಅವರು ಆತಂಕ, ಖಿನ್ನತೆ, ಒತ್ತಡ ಮತ್ತು ಆಘಾತದಿಂದ ಬಳಲುತ್ತಾರೆ. ಹಾಗಾಗಿ ಮಹಿಳೆಯರು ಮುಖ್ಯವಾಗಿ ಲೈಂಗಿಕ ಕಿರುಕುಳದ ಬಗ್ಗೆ ಅರಿವು ಹೊಂಬೇಕು. ಲೈಂಗಿಕ ಕಿರುಕುಳ ಎಂದರೇನು ಅಥವಾ ಅದನ್ನು ಹೇಗೆ ವರದಿ ಮಾಡಬೇಕು ಎಂಬುದರ ಬಗ್ಗೆ ಮಾಹಿತಿ ಹೊಂದಬೇಕು ಎಂದು ಅವರು ಹೇಳಿದರು.

ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳದ ದೂರುಗಳನ್ನು ಪರಿಹರಿಸುವ ಜವಾಬ್ದಾರಿಯನ್ನು ಆಂತರಿಕ ದೂರುಗಳ ಸಮಿತಿಗೆ ಇರುತ್ತದೆ. ಸರ್ಕಾರಿ, ಅರೆ ಸರ್ಕಾರಿ ಹಾಗೂ ಇತರೆ ಎಲ್ಲಾ ಸಂಸ್ಥೆಗಳಲ್ಲಿ ಸಮಿತಿ ಸ್ಥಾಪಿಸಲು ಕಾನೂನಿನ ಮೂಲಕ ಅಗತ್ಯವಿದೆ ಎಂದರು.

ಕಾರ್ಯಕ್ರಮದಲ್ಲಿ ವಕೀಲರಾದ ಶಿವಲೀಲ ಅವರು, "ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆಗಟ್ಟುವ ಅಧಿನಿಯಮ"ದ ಕುರಿತು ವಿವರವಾಗಿ ತಿಳಿಸಿಕೊಟ್ಟರು.

ಈ ಸಂದರ್ಭದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಅಪರ್ಣ, ನಸ್ರತ್, ರೂಪ ಚಿನಿವಾರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಸೇರಿದಂತೆ ಜಿಲ್ಲಾ ನ್ಯಾಯಾಲಯದ ಮಹಿಳಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಇಂದು ಸಂವಿಧಾನ ದಿನ ಪೀಠಿಕೆ ಸಾಮೂಹಿಕ ಓದು : ಎಡಿಸಿ ಇ.ಬಾಲಕೃಷಪ್ಪ

**ಹಂಪಿ ಟೈಮ್ಸ್ ಹೊಸಪೇಟೆ**

ನವಂಬರ್ 26 ರಂದು ಸಂವಿಧಾನ ದಿನ ನಿಮಿತ್ತ ಸಂವಿಧಾನ ಪಿಠೀಕೆಯನ್ನು ಸಾಮೂಹಿಕವಾಗಿ ಓದುವುದರ ಮೂಲಕ ಎಲ್ಲಾ ಇಲಾಖೆಗಳಲ್ಲಿ ಅರ್ಥಪೂರ್ಣವಾಗಿ ಆಚರಿಸುವಂತೆ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ತಿಳಿಸಿದ್ದಾರೆ.




ಜಿಲ್ಲಾ ವ್ಯಾಪ್ತಿಯ ಎಲ್ಲಾ ಕಚೇರಿಗಳಲ್ಲಿ ಸಂಸ್ಥೆಗಳು, ಸ್ವಾಯತ್ತ ಸಂಸ್ಥೆಗಳು, ಪಿಎಸ್‌ಯುಗಳಲ್ಲಿ ಸಾಮೂಹಿಕವಾಗಿ ಭಾರತದ ಸಂವಿಧಾನದ ಪೀಠಿಕೆಯನ್ನು ವಾಚನ ಮಾಡುವ ಮೂಲಕ ಮತ್ತು ಸಂವಿಧಾನದ ಮೌಲ್ಯಗಳು, ಮೂಲ ಆಶಯಗಳ ಬಗ್ಗೆ ಚರ್ಚೆ, ರಸಪ್ರಶ್ನೆ, ಕಾರ್ಯ ಕ್ರಮಗಳನ್ನು ಮತ್ತು ವೆಬಿನಾರ್‌ಗಳನ್ನು ಆಯೋಜಿಸಿ ಸಂವಿಧಾನ ದಿನವನ್ನು ಅರ್ಥಪೂರ್ಣವಾಗಿ ಆಚರಿಸುವಂತೆ ಹಾಗೂ ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ತಾಲೂಕು ಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕಡ್ಡಾಯವಾಗಿ ಹಾಜರಿದ್ದು ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಸೂಚಿಸಿದ್ದಾರೆ.

# ಅಪರಿಚಿತ ಮಹಿಳೆ ಮೃತ ವಾರಸುದಾರರ ಪತ್ತೆಗೆ ಮನವಿ

**ಹಂಪಿ ಟೈಮ್ಸ್ ಹೊಸಪೇಟೆ**

ನ.23 ರಂದು ಸುಮಾರು 25 ರಿಂದ 30 ವರ್ಷದ ಮಹಿಳೆಯು ಟಿ.ಸಾಖಿಬಂಡಾ ಮತ್ತು ವೀರಾಪುರ ರೈಲು ನಿಲ್ದಾಣಗಳ ಮಧ್ಯೆ ಅಮರಾವತಿ ಎಕ್ಸ್ ಪ್ರೆಸ್ ರೈಲು ಗಾಡಿಗೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ಬಳ್ಳಾರಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತ ಮಹಿಳೆಯ ಚಹರೆ: ಬಲಗೈ ಮೇಲೆ ಅಮ್ಮ ಅಂತಾ ಕನ್ನಡದಲ್ಲಿ ಹಚ್ಚೆ ಹಾಕಿಸಿಕೊಂಡಿರುತ್ತಾರೆ. ಕೊರಳಲ್ಲಿ ತಾಳಿ ಇರುತ್ತದೆ. ಈ ಮೃತ ಮಹಿಳೆಯ ಬಗ್ಗೆ ಗುರುತು ಹಾಗೂ ವಾರಸುದಾರರು ಪತ್ತೆಯಾದಲ್ಲಿ ಬಳ್ಳಾರಿ ರೈಲ್ವೆ ಪೊಲೀಸ್ ಠಾಣೆಯ ಪೊಲೀಸ್ ಉಪ ನಿರೀಕ್ಷಕರು ದೂ.ಸಂ: 9480802131, ಪೊಲೀಸ್ ವೃತ್ತ ನಿರೀಕ್ಷಕರು ರೈಲ್ವೆ ಪೊಲೀಸ್ ವೃತ್ತ ರಾಯಚೂರು ದೂ.ಸಂ: 9480800471 ಗೆ ಮಾಹಿತಿ ನೀಡುವಂತೆ ಬಳ್ಳಾರಿ ರೈಲ್ವೆ ಪೊಲೀಸ್ ಠಾಣೆಯ ಪೊಲೀಸ್ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯುವ ಉತ್ಸವ: ವಿವಿಧ ಸ್ಪರ್ಧೆಗೆ ಭಾಗವಹಿಸಲು ನೋಂದಣಿಗೆ ಆಹ್ವಾನ

**ಮೊದಲ ಪುಟದಿಂದ**

ದ್ವಿತೀಯ–ರೂ.1500 , ತೃತೀಯ–ರೂ.1000

ಜಾನಪದ ನೃತ್ಯ ಕಾರ್ಯಕ್ರಮ–ಗುಂಪು: ಪ್ರಥಮ –ರೂ.7000, ದ್ವಿತೀಯ–ರೂ.5000, ತೃತೀಯ–ರೂ.3000.

ಜಾನಪದ ನೃತ್ಯ ಕಾರ್ಯಕ್ರಮ–ವೈಯಕ್ತಿಕ: ಪ್ರಥಮ –ರೂ.2500, ದ್ವಿತೀಯ–ರೂ.1500, ತೃತೀಯ–ರೂ.1000.

ಷರತ್ತುಗಳು: ಸ್ಪರ್ಧೆಗಳಲ್ಲಿ ಭಾಗವಹಿಸುವವರ ವಯಸ್ಸು 15 ರಿಂದ 29 ವರ್ಷದೊಳಗಿನವರಾಗಿರಬೇಕು. ಹಿಂದಿ, ಇಂಗ್ಲೀಷ್‌ನಲ್ಲಿ ಮಾತನಾಡಬಹುದು. ಆಧಾರ್ ಕಾರ್ಡ್, 2 ಫೋಟೊ, ಜನ್ಮ ದಿನಾಂಕದ ದಾಖಲಾತಿ, ಬ್ಯಾಂಕ್ ಪಾಸ್‌ಬುಕ್ ಜೆರಾಕ್ಸ್ ಪ್ರತಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊ.9972552385, 9049487027ಗೆ ಸಂಪರ್ಕಿಸಬಹುದು.

# ಮಹಿಳೆಯರಿಗೆ ಮ್ಯಾಮೋಗ್ರಾಫಿ ಪರೀಕ್ಷೆ

## ಹೂಡೇಂ ಗ್ರಾಮದಲ್ಲಿ ಉಚಿತ ಕ್ಯಾನ್ಸರ್ ತಪಸಾಣಾ ಶಿಬಿರ | ಮುಂಜಾಗ್ರತ ಕ್ರಮಗಳ ಕುರಿತು ವೈದ್ಯರ ಸಲಹೆ



**ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಹೂಡೇಂ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಭಾನುವಾರ ಬೆಟ್ಟದ ಹೂವು ಸೇವಾಸಂಸ್ಥೆ (ರಿ ) ತಾಯಕನಹಳ್ಳಿ, ಪ್ರಾಥಮಿಕ ಆರೋಗ್ಯ ಕೇಂದ್ರ ಹೂಡೇಂ ಹಾಗೂ ಗ್ರಾಮ ಪಂಚಾಯಿತಿ ಹೂಡೇಂ ಇವರುಗಳ ಸಂಯುಕ್ತ ಆಶ್ರಯದಲ್ಲಿ ಮಹಿಳೆಯರಿಗಾಗಿ ಉಚಿತವಾಗಿ ಸ್ತನ ಕ್ಯಾನ್ಸರ್ ತಪಾಸಣಾ ಶಿಬಿರ ಜರುಗಿತು.

ಖ್ಯಾತ ಸ್ತ್ರೀ ರೋಗ ತಜ್ಞರಾದ ಡಾ ತೋಯಜಾಕ್ಷಿ ಬಾಯಿ ಇವರ ಉಪಸ್ಥಿತಿಯಲ್ಲಿ ಶಸ್ತ್ರ ಚಿಕಿತ್ಸಾ ವಿಭಾಗದ ಎಲ್ಲಾ ವೈದ್ಯರು ಮಹಿಳಾ ರೋಗಿಗಳಿಗೆ ಉಚಿತ ತಪಾಸಣೆ, ಸಲಹೆ, ಚಿಕಿತ್ಸೆಯನ್ನು ನೀಡಿದರು. ತಪಾಸಣಾ ಶಿಬಿರದಲ್ಲಿ ಉಚಿತವಾಗಿ ಹ್ಯೂಮನ್ ಪ್ಯಾಪಿಲೋಮಾ ವೈರಸ್ ಸೋಂಕಿನಿಂದ ಉಂಟಾಗಬಹುದಾದ ಕ್ಯಾನ್ಸರ್ ಪರೀಕ್ಷೆ, ಭವಿಷ್ಯದಲ್ಲಿ ಮಹಿಳೆಯರಿಗೆ ಎದುರಾಗಬ ಹುದಾದ ವಿವಿಧ ರೀತಿಯ ಕ್ಯಾನ್ಸರ್ ಅನ್ನು ವ್ಯಾಕ್ಸಿನ್ ಮುಖಾಂತರ ಬರದಂತೆ ತಡೆಯುವುದು, ಮ್ಯಾಮೋಗ್ರಾಫಿ ಪರೀಕ್ಷೆಯನ್ನು ಮಾಡಲಾಯಿತು. ಅವಶ್ಯಕ ರಕ್ತ ಪರೀಕ್ಷೆ ಮತ್ತು ಉಚಿತ ಔಷಧಿಯನ್ನೂ ವಿತರಿಸಲಾಯಿತು. ಶಿಬಿರದಲ್ಲಿ 43 ಜನ ಮಹಿಳೆಯರು ಪಾಲ್ಗೊಂಡು ಸದುಪಯೋಗ ಪಡೆದುಕೊಂಡರು. ಹೂಡೇಂ ಗ್ರಾ.ಪಂ ಅಧ್ಯಕ್ಷ ರಾಮಚಂದ್ರಪ್ಪ, ಸದಸ್ಯರಾದ ಕೆ.ಎನ್. ರಾಘ ವೇಂದ್ರ ತಾಯಕನ ಹಳ್ಳಿ, ಬಿ.ಕುಮಾರ್ ರೆಡ್ಡಿ, ಎಂ.ಟಿ.ಯಲ್ಲಪ್ಪ, ಪುಟ್ಟಮ್ಮ ಮಲ್ಲಿಕಾರ್ಜುನಪ್ಪ, ಅಜ್ಜಪ್ಪ ಹಾಗೂ ವೈದ್ಯರಾದ ಸರಸ್ವತಿ ಬೆಂಗಳೂರು ಮೆಡಿಕಲ್ ಸೈನ್ಸ್ ಕಾಲೇಜಿನ ಉಪನ್ಯಾಸಕರು, ಹೂಡೇಂ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಸಂದೀಪ್, ಬೆಟ್ಟದ ಹೂ ಸೇವಾ ಸಂಸ್ಥೆಯ ಅಧ್ಯಕ್ಷರಾದ ಕೆ.ಜಿ. ದಿನೇಶ್ ಕುಮಾರ್, ಡಾ, ಸುರೇಂದ್ರ ಕುಮಾರ್, ಮಾಜಿ ಗ್ರಾ.ಪಂ ಅಧ್ಯಕ್ಷ ಪಿ. ಮಂಜುನಾಥ, ಶಿಕ್ಷಕಿ ಕರಿಬಸಮ್ಮ ಎನ್, ಹಾಗೂ ಚಂದ್ರಶೇಖರ್, ಹಳೆಮನೆ ಮಹದೇವ, ಸಿ.ಎಂ. ಮಂಜುನಾಥ, ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ ವರ್ಗ, ಆಶಾ ಕಾರ್ಯಕರ್ತೆ ಯರು ಉಪಸ್ಥಿತರಿದ್ದರು,

# ಮೀನುಗಾರಿಕೆ ಇಲಾಖೆ; ವಿವಿಧ ಯೋಜನೆಗಳಡಿ ಸಹಾಯಧನ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಮೀನುಗಾರಿಕೆ ಇಲಾಖೆ ವತಿಯಿಂದ ಪ್ರಸ್ತಕ ಸಾಲಿಗೆ ವಿವಿಧ ಯೋಜನೆಗಳಡಿ ಸಹಾಯಧನ ಸೌಲಭ್ಯ ಪಡೆಯಲು ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಮೀನುಗಾರಿಕೆ ಉಪನಿರ್ದೇಶಕ ಶಿವಣ್ಣ ಅವರು ತಿಳಿಸಿದ್ದಾರೆ.

ಅರ್ಹ ಅರ್ಜಿದಾರರು ಅಗತ್ಯ ದಾಖಲೆಗಳೊಡನೆ ವೆಬ್‌ಸೈಟ್ https://ballari.nic.in ಗೆ ಭೇಟಿ ನೀಡಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬಹುದು ಅಥವಾ ಆಯಾ ತಾಲ್ಲೂಕಿನ ಮೀನುಗಾರಿಕೆ ಇಲಾಖೆ ಕಚೇರಿ ಮುಖಾಂತರ ಆನ್‌ಲೈನ್‌ನಲ್ಲಿಯೂ ಸಹ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ನ.30 ಕೊನೆಯ ದಿನವಾಗಿದೆ.

**ಯೋಜನೆಗಳ ವಿವರ:**

ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ ಮತ್ಸ್ಯವಾಹಿನಿ ಯೋಜನೆಯಡಿ ಐಸ್‌ಬಾಕ್ಸ್‌ನೊಂದಿಗೆ ಮೊಪೆಡ್ ಮತ್ತು ಸೈಕಲ್ ಖರೀದಿಸಲು ಸಹಾಯಧನ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಬಳ್ಳಾರಿ, ಸಂಡೂರು ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿ ಅಥವಾ ಮೀನುಗಾರಿಕೆ ಉಪನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.